ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 1 | ಮಾರ್ಚ್ 18, 1979 | 40 ಪೈಸೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆಯಾಗಿರುದ "ಐಕ್ಯರಂಗ" ವಾರ ಪತ್ರಿಕೆಯು 1964ರಲ್ಲಿ ಪ್ರಾರಂಭವಾಗಿ, ಇಷ್ಟರವರೆಗೆ ಮಂಗಳೂರಿನಿಂದ ಪ್ರಕಟವಾಗುತ್ತಿತ್ತು. ಎಷ್ಟೇ ಅಡೆತಡೆಗಳು ಬಂದರೂ ಪತ್ರಿಕೆಯನ್ನು ಉಳಿಸಿ, ಬೆಳೆಸಿ, ಕ್ಲುಪ್ತ ಕಾಲಕ್ಕೆ ಓದುಗರಿಗೆ ಸಿಗುವಂತೆ ಮಾಡಲು ಪಕ್ಷದ ರಾಜ್ಯ ಸಮಿತಿಯೂ, ರಾಜ್ಯಸಮಿತಿಗಿಂತಲೂ ಹೆಚ್ಚಾಗಿ ಪಕ್ಷದ ದ. ಕ. ಜಿಲ್ಲಾ ಸಮಿತಿಯೂ ಶ್ರಮವಹಿಸಿದ್ದುವು. ಆದರೆ "ಐಕ್ಯರಂಗ"ವನ್ನು ಒಂದು ಕ್ರಾಂತಿಕಾರಿ ಪತ್ರಿಕೆಯನ್ನಾಗಿ ಮಾಡುವುದರಲ್ಲೂ, ರಾಜ್ಯದ ಆರ್ಥಿಕ-ಸಾಮಾಜಿಕ-ರಾಜಕೀಯ ವಿಚಾರಗಳನ್ನು, ಹೋರಾಟಗಳನ್ನು ಪ್ರತಿಬಿಂಬಿಸುವುದರಲ್ಲೂ, ರಾಜ್ಯದ ಜನತೆಯ ಮಧ್ಯೆ ಜನಪ್ರಿಯಗೊಳಿಸುವ ಕೆಲಸಗಳಲ್ಲೂ ನಾವು ಬಹಳ ಹಿಂದೆ ಬಿದ್ದಿದ್ದೆವು.

ಕ್ರಾಂತಿಕಾರಿ ಪಕ್ಷದ ಮುಖಪತ್ರಿಕೆಗೆ ಬಹಳ ಮಹತ್ವವಿದೆ. ಸೈದ್ಧಾಂತಿಕ ಮತ್ತು ಸಂಘಟನಾ ಐಕ್ಯತೆಯನ್ನು ಬೆಳೆಸುವುದರಲ್ಲೂ, ಸಂಘಟನೆ ಮತ್ತು ಹೋರಾಟಗಳಿಗೆ ಮಾರ್ಗದರ್ಶನ ಕೊಡುವುದರಲ್ಲೂ; ಹೋರಾಟದ ಅನುಭವವನ್ನು ಹಂಚಿಕೊಳ್ಳುವುದರಲ್ಲೂ, ತಪ್ಪು ಸೈದ್ಧಾಂತಿಕ ನಿಲುಮೆ ಹಾಗೂ ಅನಿಷ್ಟ ಸಾಮಾಜಿಕ ಮೌಲ್ಯಗಳ ವಿರುದ್ಧ ನಿರಂತರ ಚಳುವಳಿಯನ್ನು ನಡೆಸುವುದರಲ್ಲೂ, ವೈಜ್ಞಾನಿಕ ಮತ್ತು ವರ್ಗದೃಷ್ಟಿಕೋನವನ್ನು ತುಂಬುವುದರಲ್ಲೂ ಕ್ರಾಂತಿಕಾರಿ ಪಕ್ಷದ ಮುಖಪತ್ರಿಕೆಗೆ ಮುಖ್ಯ ಜವಾಬ್ದಾರಿಯಿದೆ. ಅಂತೆಯೇ, ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆಯನ್ನು ಎತ್ತಿಹಿಡಿಯುವುದರಲ್ಲೂ, ಎಲ್ಲಾ ಪ್ರಗತಿಶೀಲ ವ್ಯಕ್ತಿ ಮತ್ತು ಶಕ್ತಿಗಳನ್ನು ಒಂದುಗೂಡಿಸುವುದರಲ್ಲೂ ಪಕ್ಷದ ಪತ್ರಿಕೆಗೆ ಗಹನವಾದ ಪಾತ್ರವಿದೆ. ಪಕ್ಷದ ಧೋರಣೆಗಳನ್ನು ಜನತೆಯ ಮಧ್ಯೆ ಕೊಂಡೊಯ್ಯುವ ಮುಖ್ಯ ಜವಾಬ್ದಾರಿಯೂ ಪತ್ರಿಕೆಯ ಮೇಲಿದೆ.

ಪಕ್ಷದ ರಾಜ್ಯಸಮಿತಿಯ ಮುಖಪತ್ರಿಕೆಯಾದ ಐಕ್ಯರಂಗವು ರಾಜ್ಯದ ಆರ್ಥಿಕ-ಸಾಮಾಜಿಕ-ರಾಜಕೀಯ ಚಿತ್ರಣವನ್ನು ಮತ್ತು ಜನತೆಯ ಹೋರಾಟಗಳನ್ನು ಪ್ರತಿಬಿಂಬಿಸಬೇಕು. ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ವಿಚಾರಗಳ ಬಗ್ಗೆ ಪಕ್ಷ ಹೊಂದಿರುವ ನಿಲುಮೆಗಳ ಚೌಕಟ್ಟಿನೊಳಗೆ, ರಾಜ್ಯದ ವಿಶಿಷ್ಟತೆಯನ್ನು ಅರಿತು, ರಾಜ್ಯದ ಜನಜೀವನ ಮತ್ತು ರಾಜಕೀಯದ ಬಗ್ಗೆ ಪತ್ರಿಕೆಯು ಪ್ರತಿಕ್ರಿಯೆಯನ್ನು

ಸಂಪಾದಕೀಯ

ತೋರಿಸಬೇಕು. ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ರಾಜ್ಯದ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗವನ್ನು ಸೂಚಿಸಬೇಕು. ರಾಜ್ಯಮಟ್ಟದ ಪತ್ರಿಕೆಯು ಬೇರೆ ಬೇರೆ ಶ್ರಮವಿಭಾಗದ, ಶೋಷಣೆಗೆ ಒಳಗಾದ ಎಲ್ಲಾ ಜನತೆಯ ಹೋರಾಟಗಳನ್ನು ಬೆಂಬಲಿಸುತ್ತಾ, ಮಾರ್ಕ್ಸ್‌ವಾದಿ ವಿಶ್ಲೇಷಣೆಗೆ ಒಳಪಡಿಸಬೇಕು, ಸಾಹಿತ್ಯ, ಸಾಂಸ್ಕೃತಿಕ ರಂಗಗಳೂ ಸೇರಿ, ಎಲ್ಲಾ ರಂಗಗಳಲ್ಲೂ ಶೋಷಣೆಗೆ ಅನುಕೂಲವಾಗಿರುವ ಸಿದ್ಧಾಂತ ಮತ್ತು ಮೌಲ್ಯಗಳ ವಿರುದ್ಧ ಹೋರಾಟವನ್ನು ನಡೆಸಿ, ವೈಜ್ಞಾನಿಕ ಮತ್ತು ಕ್ರಾಂತಿಕಾರಿ ದೃಷ್ಟಿಕೋನವನ್ನು ಬೆಳೆಸುವುದರಲ್ಲಿ ಸಹಾಯಕವಾಗಬೇಕು.

ಈ ಹಿಂದೆ ಪಕ್ಷದ ಮುಖಪತ್ರಿಕೆಯು ಮಂಗಳೂರಿನಿಂದ ಪ್ರಕಟವಾಗುತ್ತಲಿದ್ದುದರಿಂದ ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಅಳವಡಿಸಿಕೊಂಡು ಪತ್ರಿಕೆಯನ್ನು ಬೆಳೆಸುವುದು ಕಷ್ಟವಾಗಿತ್ತು. ಪಕ್ಷದ ರಾಜ್ಯ ಸಮಿತಿಯ ಮುಖಪತ್ರಿಕೆಯು, ರಾಜ್ಯಸಮಿತಿಯ ಕೇಂದ್ರವಾದ ಮತ್ತು ರಾಜಕೀಯ ಕೇಂದ್ರವಾದ ಬೆಂಗಳೂರಿನಿಂದ ಪ್ರಕಟವಾದರೆ ಮೇಲಿನ ಅಂಶಗಳಲ್ಲಿ ಅನೇಕವನ್ನು ಸ್ವಾಭಾವಿಕವಾಗಿ ಅಳವಡಿಸಲು ಆಗುವುದು. ಕಾರ್ಮಿಕವರ್ಗದ, ವಿದ್ಯಾರ್ಥಿ-ಬುದ್ಧಿಜೀವಿಗಳ ಕೇಂದ್ರವಾದ ಬೆಂಗಳೂರಿನಿಂದ ಪತ್ರಿಕೆಯು ಪ್ರಕಟವಾದಲ್ಲಿ ಪ್ರಗತಿಶೀಲ ಶಕ್ತಿಗಳೊಡನೆ ಸಂಬಂಧ ಮತ್ತು ಐಕ್ಯತೆಯನ್ನು ಸಾಧಿಸುವುದು ಸುಲಭವಾಗುವುದು. ಕಾರ್ಮಿಕವರ್ಗದ ಪಕ್ಷದ ಮುಖಪತ್ರಿಕೆಯು ಕಾರ್ಮಿಕವರ್ಗದ ಕೇಂದ್ರ[illegible] ಹೊರಬಂದಲ್ಲಿ, ಕಾರ್ಮಿಕವರ್ಗವನ್ನು ಸಂಘಟಿಸುವುದರಲ್ಲೂ, ಅವರ [illegible] ಜಾಗೃತಿಯನ್ನು ಹೆಚ್ಚಿಸುವುದರಲ್ಲೂ, ಕಾರ್ಮಿಕ ಮತ್ತು ರೈತರ ಸಖ್ಯವನ್ನು ಬೆಳೆಸುವುದರಲ್ಲೂ ಸಹಕಾರಿಯಾಗುವುದು.

ಈ ಕಾರಣಗಳಿಂದ ಮತ್ತು ನಮ್ಮ ಪಕ್ಷದ ಬಹಳಷ್ಟು ಮಂದಿಯ ಅಪೇಕ್ಷೆ ಮೇರೆಗೆ, "ಐಕ್ಯರಂಗ" ಪತ್ರಿಕೆಯನ್ನು ಬೆಂಗಳೂರಿನಿಂದ ಪ್ರಕಟಿಸುವ ತೀರ್ಮಾನವನ್ನು ರಾಜ್ಯಸಮಿತಿಯು ಮಾಡಿತ್ತು. ಈ ತೀರ್ಮಾನದಂತೆ ಇಂದೀಗ "ಐಕ್ಯರಂಗ"ವನ್ನು ಬೆಂಗಳೂರಿನಿಂದ ಪ್ರಕಟಿಸಲು ನಮಗೆ ಅತ್ಯಂತ ಸಂತೋಷವಾಗುತ್ತಿದೆ. ಪತ್ರಿಕೆಯು ಮೇಲಿನ ಎಲ್ಲಾ ಉದ್ದೇಶಗಳನ್ನು ಪೂರೈಸುವಂತೆ ಮಾಡುವುದರಲ್ಲಿ ಪಕ್ಷದ ಎಲ್ಲಾ ಸಮಿತಿಗಳು, [illegible] ಸದಸ್ಯರು ಮತ್ತು ಹಿತೈಷಿಗಳಿಗೆ ಮಹತ್ವದ ಜವಾಬ್ದಾರಿಯಿದೆ. ಬೇರೆ ಬೇರೆ ಕಡೆಗಳಿಂದ ವಾರ್ತೆಗಳನ್ನು ಕಳುಹಿಸುವುದು, ಪತ್ರಿಕೆಯನ್ನು [illegible] ಮುಖಾಂತರ[illegible]ಯಿಂದ ಮಾರಾಟ [illegible] ಗೊಳಿಸಲು ಸಮಯೋಚಿತ ಟೀಕೆ ಮಾಡುವುದು—ಇವೆಲ್ಲಾ ನಿಮ್ಮೆಲ್ಲರ [illegible] ಪತ್ರಿಕೆಯನ್ನು ಮೇಲಿನ ಉದ್ದೇಶಗಳನ್ನು ಗಮನದಲ್ಲಿರಿಸಿ ಪ್ರಕಟಿಸುವುದು, [illegible] ಓದುಗರನ್ನು ತಲಪುವಂತೆ ಮಾಡುವ ಜವಾಬ್ದಾರಿ ನಮ್ಮಲ್ಲಿದೆ.

ಪತ್ರಿಕೆಯನ್ನು ಬೆಂಗಳೂರಿನಿಂದ ಪ್ರಕಟಿಸುವ ತೀರ್ಮಾನ ಮತ್ತು ಈಗ ಅದರ ಪ್ರಕಟಣೆ, ಇವೆರಡರ ಮಧ್ಯೆ ಹಲವು ಸಂಚಿಕೆಗಳು ಪ್ರಕಟವಾಗದೆ ನಮ್ಮ ಓದುಗರಿಗೆ ಹಲವು ಅನಾನುಕೂಲತೆಗಳಾಗಿವೆ. ಆದರೆ ಇದು ಅನಿವಾರ್ಯವಾಗಿತ್ತು. ನಾವೂ, ನೀವೂ ಸೇರಿ ಪತ್ರಿಕೆಯನ್ನು ಕ್ರಾಂತಿಕಾರಿ ಪತ್ರಿಕೆಯನ್ನಾಗಿಸಿ, ರಾಜ್ಯದಲ್ಲಿ ದುಡಿಯುವ ಜನತೆಯ ಹೋರಾಟದ ಕೈ ದೀವಿಗೆಯನ್ನಾಗಿ ಮಾಡಲು ಶ್ರಮಿಸೋಣ.

ಚರಣಸಿಂಗರ ಬಜೆಟ್ ಜನತಾ ವಿರೋಧಿ - ಹಣದುಬ್ಬರಕ್ಕೆ ದಾರಿ

ಆರ್ಥಿಕ ಸಾಮಾಜಿಕ ಬಿಕ್ಕಟ್ಟಿನ ಭಾರವನ್ನು ಹೊತ್ತ, ಹಿಂದಿನ ಸರಕಾರವು ಹೇರುತ್ತಾ ಬಂದ ಹೊರಲಾಗದಷ್ಟು ಕರಭಾರದಿಂದ ತತ್ತರಿಸುತ್ತಿದ್ದ ಜನತೆಯ ಮೇಲೆ ಚರಣಸಿಂಗರ ಮುಂಗಡ ಪತ್ರವು ಇನ್ನೂ ಹೆಚ್ಚಿನ ಹೊರೆಯನ್ನು ಹೇರಿದೆ. ಕೃಷಿಕರಿಗೆ ಅನುಕೂಲವಾಗಿರುವ ಪ್ರಥಮ ಬಾರಿ[illegible] ಬಜೆಟ್ ಎಂದು ಚರಣಸಿಂಗರು ತಮ್ಮ ಬಜೆಟ್ಟನ್ನು ವರ್ಣಿಸಿರುವರು. ರೈತರಿಗೆ ಬಹಳ ಅನುಕೂಲವಾದ ಮತ್ತು ನಗರವಾಸಿಗಳಿಗೆ ತುಂಬಾ ಭಾರವಾದ ಬಜೆಟ್ ಎಂದು ಹಲವು ಮೂಲೆಗಳಿಂದ ಪ್ರತಿಕ್ರಿಯೆ ಬಂದಿದೆ. ಪ್ರಥಮ ಬಾರಿಗೆ ಬಡವರ ಕಡೆಗೆ ದೃಷ್ಟಿಹರಿಸಿ, ಹೊಸ ರೂಪು ನೀಡಿರುವ ಬಜೆಟ್ ಎಂಬುದಾಗಿ ಶ್ರೀ ದೇವರಾಜ ಅರಸ್ ಅವರು ಚರಣಸಿಂಗರನ್ನು ಕೊಂಡಾಡಿರುವರು. ಆಳುವ ಜನತಾ ಪಕ್ಷದ ಕೆಲವು ವಿಭಾಗಗಳಿಂದಲೂ, ಸಾಮೂಹಿಕ ಸಂಘಟನೆಗಳಿಂದಲೂ, ಎಡ ಪಕ್ಷಗಳಿಂದಲೂ ಬಜೆಟ್ ಬಗ್ಗೆ ತೀವ್ರವಾದ ಟೀಕೆಗಳು ಬಂದಿವೆ.

1979-80ನೇ ಸಾಲಿನ ವಾರ್ಷಿಕ ಆಯವ್ಯಯದ ಬಜೆಟ್ಟನ್ನು ಸ್ವಲ್ಪ ವೀಕ್ಷಿಸಿದಲ್ಲಿ, ಯಾವ ವಿಭಾಗಕ್ಕೆ ಅನುಕೂಲವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಬಜೆಟ್ಟಿನಲ್ಲಿರುವ ಖೋತಾವನ್ನು ಭರ್ತಿ ಮಾಡಲು ಜನ ಸಾಮಾನ್ಯರೂ, ಹಳ್ಳಿಯ ಬಡವರೂ ಸೇರಿದಂತೆ ಎಲ್ಲಾ ಶ್ರಮಜೀವಿಗಳೂ ಉಪಯೋಗಿಸುವ ದಿನನಿತ್ಯದ ಬಳಕೆ ವಸ್ತುಗಳ ಮೇಲೆ ದೊಡ್ಡ ಪ್ರಮಾಣದ ಹೊಸ ತೆರಿಗೆಗಳನ್ನು ಹೇರಲಾಗಿದೆ. ಸೀಮೆ ಎಣ್ಣೆ, ಬೆಂಕಿಪೊಟ್ಟಣ, ಬೀಡಿ, ಸಿಗರೇಟು, ಸಾಬೂನು, ಇನ್‌ಲೇಂಡ್ ಲೆಟರ್, ಕವರು ಇತ್ಯಾದಿ ಜನಸಾಮಾನ್ಯರು ಬಳಸುವ ವಸ್ತುಗಳು ಇನ್ನು ತುಂಬಾ ದುಬಾರಿ. ಇದೇ ಸಂದರ್ಭ ರೈತರಿಗೆ ಅನುಕೂಲ ಮಾಡುವ ನೆಪದಲ್ಲಿ ಶ್ರೀಮಂತ ರೈತರಿಗೂ, ಭೂಮಾಲೀಕ ವರ್ಗಕ್ಕೂ ಅನೇಕ ರಿಯಾಯಿತಿಗಳನ್ನು ತೋರಲಾಗಿದೆ. ಚರಣಸಿಂಗರ ಗ್ರಾಮಾಂತರ ಪ್ರದೇಶ ಮತ್ತು ಕೃಷಿಕರ ಮೇಲಿನ ಒಲವು ಎಂದರೆ ಶ್ರೀಮಂತ ರೈತ ಮತ್ತು ಭೂಮಾಲೀಕವರ್ಗದ ಮೇಲೆ ಎಂಬುದು ಸ್ಪಷ್ಟವಾಗಿದೆ. ಹೊಸ ಕರಗಳ ಪರಿಣಾಮವಾಗಿಯೂ, ಇನ್ನೂ ತುಂಬದೆ ಇರುವ 1355 ಕೋಟಿ ರೂಪಾಯಿಗಳ ಕೊರತೆಯಿಂದಲೂ ಎಲ್ಲಾ ರಂಗಗಳಲ್ಲೂ ಬೆಲೆಯೇರಿಕೆಯಾಗುವುದು ಖಂಡಿತ. ಪರಿಣಾಮ ಜನಸಾಮಾನ್ಯರ, ಶ್ರಮಜೀವಿಗಳ ಮತ್ತು ನಗರವಾಸಿಗಳ ಜೀವನ ವೆಚ್ಚ ಬಹಳಷ್ಟು ಹೆಚ್ಚಲಿದೆ—ಈಗಾಗಲೇ ಹೆಚ್ಚಿದೆ.

ಚರಣಸಿಂಗರ ಬಜೆಟ್ಟಿನಲ್ಲಿ ನಿರುದ್ಯೋಗ ನಿವಾರಣೆ, ಶ್ರಮಜೀವಿಗಳ ಜೀವನ ಮಟ್ಟವನ್ನು ಮೇಲೆತ್ತುವುದು, ಹಳ್ಳಿಯ ಬಡವರಿಗೆ ಅನುಕೂಲ ಕೊಡುವಂತ ಸೂಚನೆಗಳೇ ಇಲ್ಲ. ಕೃಷಿಕರಿಗೆ ಅನುಕೂಲವಾಗಿದೆ ಎಂದು ಹೇಳಿರುವ ಚರಣಸಿಂಗರ ಬಜೆಟ್ಟಿನಲ್ಲಿ ಹಳ್ಳಿಯ ಶ್ರೀಮಂತರಿಗೆ ಕೆಲವೊಂದು ಅನುಕೂಲಗಳನ್ನು ಮತ್ತು ಬಂಡವಾಳಗಾರರಿಗೆ ರಿಯಾಯಿತಿ ಬಿಟ್ಟರೆ ಇನ್ನೇನೂ ಇಲ್ಲ. ಈ ಬಜೆಟ್ ಜನತೆಯ ವಿರೋಧಿಯಾಗಿದೆ. ಜನಸಾಮಾನ್ಯರು ದಿನನಿತ್ಯ ಬಳಸುವ ಜೀವನಾವಶ್ಯಕ ವಸ್ತುಗಳ ಮೇಲೆ ಹೇರಿದ ಹೊಸ ತೆರಿಗೆಗಳನ್ನು ಹಿಂದೆಗೆಯಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸೆಕ್ರೆಟಾರಿಯಟ್ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ.

ನ್ಯಾಯಾಂಗ ತನಿಖೆಗೆ ಒಪ್ಪಿಗೆ

ಇಂದಿರಾಗಾಂಧಿಯವರ ಬಂಧನವಾದ ಸಂದರ್ಭ 1978 ಡಿಸೆಂಬರ್ 19, 20 ದಿನಗಳಲ್ಲಿ ರಾಜ್ಯದಾದ್ಯಂತ ನಡೆದ ಗಲಭೆಗಳ ಬಗ್ಗೆ, ಜನರಿಗೆ ರಕ್ಷಣೆ ಕೊಡುವುದರಲ್ಲಿ ಪೋಲೀಸರು ನಿಷ್ಕ್ರೀಯರಾಗಿದ್ದುದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಜನತಾ ಪಕ್ಷ, ಅಖಿಲ ಭಾರತ ಮುಸ್ಲಿಂ ಲೀಗ್, ಕನ್ನಡ ಚಳುವಳಿ ಪಕ್ಷ ಮತ್ತು ಡಿ. ಎಸ್. ಕೆ. ಪಕ್ಷಗಳು ಜಂಟಿಯಾಗಿ ಚಳುವಳಿ ನಡೆಸಿದವು. ನ್ಯಾಯಾಂಗ ತನಿಖೆಗೆ ಒತ್ತಾಯ ತರಲು ಮಾರ್ಚ್ 19ರಂದು ಬಜೆಟ್ ಅಧಿವೇಶನದ ಪ್ರಾರಂಭದ ದಿನ ವಿಧಾನ ಸೌಧದೆದುರು ಬೃಹತ್ ಪ್ರತಿಭಟನಾ ಸಭೆ ನಡೆಸಲು ತಯಾರಿಯು ಜಂಟಿಯಾಗಿ ನಡೆಯುತ್ತಿತ್ತು.

ವಿರೋಧ ಪಕ್ಷದವರೊಂದಿಗೆ ಮಾತುಕತೆ ನಡೆದು, ಸಂಬಂಧಪಟ್ಟ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆಯನ್ನು ನಡೆಸಲು ಶ್ರೀ ದೇವರಾಜ ಅರಸ್ ಅವರು ಒಪ್ಪಿದ್ದರಿಂದ ವಿರೋಧಪಕ್ಷಗಳ ಜಂಟೀ ಸಮಿತಿಯು ಮಾರ್ಚ್ 19ರಂದಿನ ಕಾರ್ಯಕ್ರಮ ಮತ್ತು ಚಳುವಳಿಯನ್ನು ನಿಲ್ಲಿಸಿದೆ.

ಜನನಾಯಕ ಎ. ಕೆ. ಜಿ.

ಎರಡು ವರ್ಷಗಳ ಹಿಂದಿನ ಮಾರ್ಚ್ 22ನೇ ದಿನಾಂಕದಂದು ಭಾರತದ ಕೋಟ್ಯಾಂತರ ರೈತ-ಕೂಲಿಗಾರರ ನೆಚ್ಚಿನ ದಾರಿದೀಪವೊಂದು ನಂದಿಹೋಯಿತು. ಅಂದು ಮಧ್ಯರಾತ್ರಿ ಭಾರತದ ಕೋಟ್ಯಾಂತರ ಜನತೆ ಎಂದಿನಂತೆ ನಿದ್ರೆ ಮಾಡುತ್ತಲಿರಲಿಲ್ಲ. ಕಾರಣ 1977ನೇ ಇಸವಿಯ ಐತಿಹಾಸಿಕ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಅವರೆಲ್ಲ ಆಲಿಸುತ್ತಿದ್ದರು. ದೇಶದ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಂಡಿದ್ದ ಸರ್ವಾಧಿಕಾರಿ ಇಂದಿರಾಗಾಂಧಿ ಮತ್ತು ಆಕೆಯ ಕಾಂಗ್ರೆಸ್ ಪಕ್ಷವು ಚುನಾವಣೆಗಳಲ್ಲಿ ಧೂಳೀಪಟವಾದದ್ದನ್ನು ಜನತೆ ಕೇಳಿ ಆನಂದಿಸುತ್ತಿರುವಂತೆಯೇ ರೇಡಿಯೋದಲ್ಲಿ ಬಿತ್ತರವಾದ ಮತ್ತೊಂದು ಕಹಿ ಸುದ್ದಿಯು ಅವರನ್ನು ಗರಬಡಿದವರಂತೆ ಮಾಡಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಹಾನಾಯಕ ಎ. ಕೆ. ಗೋಪಾಲನ್ ನಿಧನರಾದರು ಎಂಬುದೇ ಆ ಸುದ್ದಿ.

ಕೇರಳ ರಾಜ್ಯದ ಕಣ್ಣನೂರು ಜಿಲ್ಲೆಯ ಪುಟ್ಟ ಹಳ್ಳಿಯಲ್ಲಿ 1904ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಜನಿಸಿದ ಎ. ಕೆ. ಗೋಪಾಲನ್ ಅವರು ನಾಡಿನ ಕೋಟಿ ಕೋಟಿ ಜನತೆಗೆ ಎ.ಕೆ.ಜಿ. ಎಂದೇ ಪರಿಚಿತರು. ಮಕ್ಕಳಂತೆ ತುಂಬ ಲವಲವಿಕೆಯಿಂದ ಮಾತನಾಡುತ್ತಿದ್ದ ಎ.ಕೆ.ಜಿ.ಯವರು ತಮ್ಮ ಬದುಕು ಆರಂಭಿಸಿದ್ದು ಮಕ್ಕಳಿಗೆ ಪಾಠ ಹೇಳಿಕೊಡುವ ಶಾಲಾ ಮಾಸ್ತರಾಗಿ. ಅಂದು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದ ಕಾಂಗ್ರೆಸ್ ಪಕ್ಷವು ಹುಟ್ಟಾ ಹೋರಾಟಗಾರರಾಗಿದ್ದ ಎ.ಕೆ.ಜಿ.ಯವರನ್ನು ಸಹಜವಾಗಿ ಆಕರ್ಷಿಸಿತು. ಸ್ವಾತಂತ್ರ್ಯ ಸಮರಕ್ಕೆ ಧುಮುಕಿದ ಎ.ಕೆ.ಜಿ.ಗೆ ಎಲ್ಲರಂತೆ ಸೆರೆಮನೆವಾಸ. ನಾಡಿಗೆ ಸ್ವಾತಂತ್ರ್ಯ ಬಂದು ಬ್ರಿಟೀಷರು ದೇಶಬಿಟ್ಟು ತೊಲಗಿದರೂ ಜೈಲು ಮಾತ್ರ ಎ.ಕೆ.ಜಿ.ಯವರನ್ನು ಜೀವನದುದ್ದಕ್ಕೂ ಬಿಡಲಿಲ್ಲ. ಕಾರಣ; ಇವರದು ನಿರಂತರ ಚಳುವಳಿಯ ಬದುಕು. ತಮ್ಮ ಕ್ರಾಂತಿಕಾರಿ ರಾಜಕೀಯ ಜೀವಿತದ 44 ವರ್ಷಗಳಲ್ಲಿ 17 ವರ್ಷಗಳನ್ನು ಜೈಲಿನಲ್ಲೇ ಕಳೆದ ಇವರದು ತ್ಯಾಗಮಯ ಬದುಕು. ಒಮ್ಮೆ ತಮ್ಮನ್ನು ದೀರ್ಘಕಾಲ ಸೆರೆಮನೆಯಲ್ಲಿ ವಿನಾಕಾರಣ ಇಟ್ಟಿದ್ದ ಅಂದಿನ ಮದರಾಸ್ ಸರ್ಕಾರದ ವಿರುದ್ಧ ನ್ಯಾಯಾಲದಲ್ಲಿ, ಕಾನೂನು ಪದವೀಧರರಲ್ಲದ ಎ.ಕೆ.ಜಿ.ಯವರು ಸ್ವತಃ ತಾವೇ ವಾದಮಾಡಿ ವಿಜಯಿಗಳಾಗಿ ಹೊರಬಂದದ್ದನ್ನು ಇಂದಿನ ಕಾನೂನು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ.

ಸ್ವಾತಂತ್ರ್ಯ ಹೋರಾಟಕ್ಕಾಗಿ ಕಾಂಗ್ರೆಸ್ ಸರ್ಕಾರದವರು ಕೊಟ್ಟ ತಾಮ್ರಪತ್ರ ಮತ್ತು ಮಾಸಾಶನವನ್ನು ಎ.ಕೆ.ಜಿ. ಮುಟ್ಟಲಿಲ್ಲ. ನಮ್ಮ ಜನತೆಗೆ ನಿಜವಾದ ಸ್ವಾತಂತ್ರ್ಯ ಬಂದಿಲ್ಲ– ಇದು ಅವರು ಕೊಟ್ಟ ಕಾರಣ. ರಾಷ್ಟ್ರಕ್ಕೆ ರಾಜಕೀಯ ಸ್ವಾತಂತ್ರ್ಯ ದೊರಕಿದ್ದರೂ, ಜನತೆಯು ಶೋಷಣೆಯಿಂದ ಮುಕ್ತರಾಗಿಲ್ಲ ಎಂದು ಅವರು ತಮ್ಮ ಹೋರಾಟವನ್ನು ಮುಂದುವರಿಸಿದರು. ಕಾಂಗ್ರೆಸ್ ಪಕ್ಷವು ಹಾಕಿಕೊಂಡ ಕಾರ್ಯಕ್ರಮ ಮತ್ತು ಅನುಸರಿಸಿದ ಪಥವು ಶೋಷಕರಾದ ಬಂಡವಾಳಶಾಹಿಗಳ ಮತ್ತು ಜಮೀನ್ದಾರರ ಪರವಾದದ್ದೆಂದು ಆ ಪಕ್ಷವನ್ನು ತ್ಯಜಿಸಿದ ಎ.ಕೆ.ಜಿ. ಯವರು ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. 1964ರಲ್ಲಿ ಕಮ್ಯುನಿಸ್ಟ್ ಪಕ್ಷವು ಒಡೆದು ಎರಡಾದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿಕೊಂಡ ಈ ಮಹಾನ್ ಮಾನವಪ್ರೇಮಿ ತನ್ನ ಜೀವಿತದಲ್ಲಿ ಒಬ್ಬ ಶತ್ರುವನ್ನೂ ಸಂಪಾದಿಸದಂತಹ ಸ್ನೇಹಜೀವಿ.

1952ರಿಂದ 1977ರವರೆಗಿನಷ್ಟು ದೀರ್ಘಕಾಲ ಸಂಸತ್ ಸದಸ್ಯರಾಗಿದ್ದರೂ ಎ.ಕೆ.ಜಿ.ಯವರು ದಿಲ್ಲಿಯಲ್ಲಿ ಇರುತ್ತಿದ್ದುದು ಸಂಸತ್ ಕಲಾಪಗಳ ಅವಧಿಯಲ್ಲಿ ಮಾತ್ರ. ಉಳಿದಂತೆ ಅವರು ದೇಶದ ಎಲ್ಲ ಕಡೆ ಚಳುವಳಿಗಾರರ ನಡುವೆ ಇರುತ್ತಿದ್ದ ಈ ಜನನಾಯಕ ಎಂದೂ ರಾಜಿಗೆ ಬಗ್ಗಲಿಲ್ಲ.

1972ರಲ್ಲಿ ನಮ್ಮ ರಾಜ್ಯದ ಕೋಲಾರ ಜಿಲ್ಲೆಯಲ್ಲಿ ನಡೆದ ಭೂಗ್ರಹಣ ಚಳುವಳಿಯ ಸ್ಫೂರ್ತಿಯ ಖನಿಯಾಗಿದ್ದ ಎ.ಕೆ.ಜಿ. ಗೆ ರೈತ ಸಂಘಟನೆಯಲ್ಲಿ ಅಪಾರ ಆಸಕ್ತಿ. ತಮ್ಮ ಅಂತ್ಯದ ದಿವಸದವರೆಗೂ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಗಿದ್ದ ಕೇವಲ ಒಬ್ಬ ವ್ಯಕ್ತಿಯಾಗಿರಲಿಲ್ಲ. ಅವರೊಂದು ಮಹಾನ್ ಶಕ್ತಿಯಾಗಿದ್ದರು. ರೈತರ ಬೇಡಿಕೆಗಳ ಈಡೇರಿಕೆಗಾಗಿ ಕೇರಳದಿಂದ ಮದರಾಸಿನವರೆಗೂ ಮುನ್ನೂರು ಮೈಲಿ ಮೆರವಣಿಗೆಯಲ್ಲಿ ರೈತರೊಟ್ಟಿಗೆ ಬಂದಿದ್ದ ಎ.ಕೆ.ಜಿ.ಯವರು ಬಹುಜನರ ಪಾಲಿಗೆ ಇಂಡಿಯಾದ ಮಾವೋ ಆಗಿ ಕಂಡಿದ್ದರು. ಗುರುವಾಯೂರು ದೇವಸ್ಥಾನದ ಒಳಕ್ಕೆ ಹರಿಜನರಿಗೆ ಪ್ರವೇಶ ಸಿಕ್ಕಬೇಕೆಂದು ಚಳುವಳಿಯನ್ನೇ ಹೂಡಿದ ಈ ಸಮಾಜ ವಿಜ್ಞಾನಿ, ಸಮಾಜಿಕ ದಬ್ಬಾಳಿಕೆಯ ವಿರುದ್ಧ ತನ್ನ ಬದುಕಿನುದ್ದಕ್ಕೂ ನಿರಂತರ ಹೋರಾಡಿದರು.

ಮಾನವನಿಂದ ಮಾನವನ ಶೋಷಣೆಯಾಗಬಾರದು– ಶೋಷಣೆಯೇ ಎಲ್ಲ ಸಂಕಷ್ಟಗಳ ಮೂಲ ಎಂಬ ಮಾರ್ಕ್ಸ್‌ನ ತತ್ವಗಳನ್ನು ಒಪ್ಪಿದ್ದ ಎ. ಕೆ. ಜಿ. ಯವರು ಮಾರ್ಕ್ಸ್‌ವಾದ ಪುಸ್ತಕದಿಂದ ಅಷ್ಟಾಗಿ ಕಲಿಯಲಿಲ್ಲ. ಅವರು ಕಲಿತದ್ದು ಜನತೆಯಿಂದ. ಸಮಾನತೆಯ ಆಧಾರದ ಮೇಲೆ ನಿಂತ ಮುಕ್ತ ಹಾಗೂ ಸಮಾನತಾ ಸಮಾಜ ನಿರ್ಮಾಣಕ್ಕೆ ಎ.ಕೆ.ಜಿ. ದುಡಿದರು– ಹೋರಾಡಿದರು– ಮಡಿದರು. ನಮ್ಮ ನಾಡಿನ ಅಪೂರ್ವ ಕ್ರಾಂತಿ ಇತಿಹಾಸದಲ್ಲಿ ಚಿರಸ್ಥಾಯಿಯಾದ ಮುದ್ರೆಯನ್ನೊತ್ತಿ ಹೋಗಿದ್ದಾ[illegible] ಕಂಡ [illegible]ತೆಯ ಸುಂದರ ಸಮಾಜ ಇನ್ನೂ ಒಂದು ಸಿಹಿ ಕನಸಾಗಿಯೇ ಇದೆ. ಆ ಕನಸು ನನಸಾಗುವ ಕಡೆ ದುಡಿಯುವುದೇ ಎ.ಕೆ.ಜಿ.ಯ ಅರ್ಥಪೂರ್ಣ ಸ್ಮರಣೆ.

ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮಾವೇಶ

ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು 31 ವರ್ಷಗಳಾದರೂ ದುಡಿಯುವ ಮಹಿಳೆಯರ ಒಟ್ಟಿನಲ್ಲಿ ಎಲ್ಲಾ ಮಹಿಳೆಯರ ಸ್ಥಾನಮಾನ ಹಕ್ಕು ಬಾಧ್ಯತೆ ಉತ್ತಮಗೊಳ್ಳುವ ಬದಲು ಹದಗೆಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ರಾಷ್ಟ್ರ ಅಂತರರಾಷ್ಟ್ರೀಯ ಮಹಿಳಾ ವರ್ಷವನ್ನು ಆಚರಿಸಿದ್ದರೂ, ಅನೇಕ ವರ್ಷಗಳ ಕಾಲ ಮಹಿಳೆಯೇ ಪ್ರಧಾನಿಯಾಗಿದ್ದರೂ ಮಿಲಿಯಾಂತರ ದುಡಿಯುವ ಮಹಿಳೆಯರ ಸ್ಥಿತಿ-ಗತಿ, ಸ್ಥಾನಮಾನ, ಹಕ್ಕುಬಾಧ್ಯತೆ ರಕ್ಷಿಸಲು ಕ್ರಮಗಳನ್ನು ಕೈಗೊಂಡಿಲ್ಲ. ದುಡಿಯುವ ಮಹಿಳೆಯರಿಗೆ ಹೆರಿಗೆ ಭತ್ಯ ಕಾನೂನು, ಸಮನಾದ ಕೆಲಸಕ್ಕೆ ಸಮನಾದ ಕೂಲಿ ಕಾನೂನು, ರಾತ್ರಿ ವೇಳೆಯಲ್ಲಿ ಮಹಿಳೆಯರನ್ನು ದುಡಿಸುವುದನ್ನು ನಿಷೇಧಿಸುವ ಕಾನೂನುಗಳು ಕಾಗದದ ಮೇಲೆ ಉಳಿದಿದೆ. ಸರ್ಕಾರ ಮತ್ತು ಅಧಿಕಾರಿಗಳು ಅದನ್ನು ಜಾರಿಗೊಳಿಸುವ ಗೋಜಿಗೇ ಹೋಗಿಲ್ಲ. ವರದಕ್ಷಿಣೆ ನಿಷೇಧದ ಬಗ್ಗೆ ಕಾನೂನಿದ್ದರೂ ಭಾಷಣಗಳು ನಡೆಯುತ್ತಿದ್ದರೂ ವರದಕ್ಷಿಣೆಯನ್ನು ತಡೆಗಟ್ಟುವ ಯಾವ ಉಗ್ರ ಕ್ರಮವೂ ನಡೆದಿಲ್ಲ. ಬದಲಾಗಿ ವರದಕ್ಷಿಣೆ ಹಾವಳಿ ಹೆಚ್ಚುತ್ತಿದೆ. ಸಮಾಜದಲ್ಲಿ ಸ್ತ್ರೀಯರಿಗೆ ಸರಿಸಮಾನವಾದ ಹಕ್ಕಿಲ್ಲ. ಹಿಂದೂ ಧರ್ಮದ ಕಾಯಿದೆ ಪ್ರಕಾರ ಮಹಿಳೆಯರಿಗೆ ಆಸ್ತಿ ಹಕ್ಕಿನ ಬಗ್ಗೆಯೂ ಸಹ ಪುರುಷರಿಗಿಂತ ವ್ಯತ್ಯಾಸ ತೋರಿಸಲಾಗಿದೆ. ಇವುಗಳಿಗೆ ಮುಖ್ಯ ಕಾರಣ ಸಮಾಜದಲ್ಲಿ ಮಹಿಳೆಯರು ಆರ್ಥಿಕವಾಗಿ ಪುರುಷರನ್ನು ಅವಲಂಭಿಸಿರುವುದು. ಇಂದಿನ ಸಮಾಜ ದುಡಿಯುವ ಮಹಿಳೆಯರನ್ನು ಕುಟುಂಬದ ಸಂಪಾದನೆಗೆ ಸ್ವಲ್ಪ ಸಹಾಯ ಮಾಡುವರೆಂದು ಪರಿಗಣಿಸಿ ಅವರಿಗೆ ಬಹಳ ಕಡಿಮೆ ಕೂಲಿ ಕೊಡುತ್ತದೆ. ಅವರ ಕೆಲಸದ ಸ್ಥಿತಿಗತಿ ಬಹಳ ಹದಗೆಟ್ಟಿದೆ.

ಮಾಲೀಕರುಗಳು ದುಡಿಯುವ ಮಹಿಳೆಯರಿಗೆ ಹೆರಿಗೆ ಭತ್ಯ ಕೊಡಬೇಕು, ಮಕ್ಕಳಿಗೆ "ಕ್ರೈಷೆ" (ಮಕ್ಕಳನ್ನು ನೋಡಿಕೊಳ್ಳಲು ದಾದಿ ವ್ಯವಸ್ಥೆ) ವ್ಯವಸ್ಥೆ ನೀಡಬೇಕು ಎಂಬ ಕಾರಣದ ಮೇಲೆ ಕಾರ್ಖಾನೆಗಳಲ್ಲಿ ಮಹಿಳೆಯರ ಸಂಖ್ಯೆಯನ್ನು ಕಡಿಮೆ ಮಾಡುತ್ತಿದ್ದಾರೆ. ಕೆಲವು ಕಾರ್ಖಾನೆಗಳಲ್ಲಿ ಮಹಿಳೆಯರು ಹೆರಿಗೆ ರಜದಲ್ಲಿ ಹೋದರೆ ಪುನಃ ಅವ[illegible]ರಿಗೆ ಕೆಲಸ ಕೊ[illegible] ಅವರನ್ನು ಕೆಲಸದಿಂದ ತೆಗೆಯಲಾಗುತ್ತದೆ. ದುಡಿಯುವ ದೊರಕುವುದಿಲ್ಲ ಹೊಲಗಳಲ್ಲಿ ದುಡಿದರೆ ನಮ್ಮ ರಾಜ್ಯದ ಬಹುಭಾಗದಲ್ಲಿ ದಿನವೊಂದಕ್ಕೆ ಕೇವಲ ಎರಡು ಅಥವಾ ಮೂರು ರೂಪಾಯಿ ದೊರೆಯುತ್ತದೆ. ಕರ್ನಾಟಕ ರಾಜಧಾನಿಯಾದ ಬೆಂಗಳೂರಿನಲ್ಲೇ ಸಹಸ್ರಾರು ಮಹಿಳಾ ಕಾರ್ಮಿಕರು ಇಂಜಿನಿಯರಿಂಗ್, ಮತ್ತಿತರ ಕಾರ್ಖಾನೆಗಳಲ್ಲಿ ಕೇವಲ ಎರಡೂವರೆ ಅಥವಾ ಮೂರು ರೂಪಾಯಿಗಳಿಗೆ ದುಡಿಯುತ್ತಿದ್ದಾರೆ. ಅವರು ಸಂಘಟಿತರಾಗಲು ಪ್ರಯತ್ನಿಸಿದರೆ ಮಾಲೀಕರು ಪೋಲೀಸ್ ಮತ್ತು ರೌಡಿಗಳ ನೆರವಿನಿಂದ ಸಂಘಟನೆಯನ್ನು ಪುಡಿ ಮಾಡಲು ಪ್ರಯತ್ನಿಸುತ್ತಾರೆ. ಇದಕ್ಕೆ ಹಾಸನದ ಕಾಫಿ ಕ್ಯೂರಿಂಗ್ ವರ್ಕ್ಸ್ ಮಹಿಳಾ ಕಾರ್ಮಿಕರು, ಬೆಂಗಳೂರಿನ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟಿನ ಮಹಿಳಾ ಕಾರ್ಮಿಕರು, ಬೆಂಗಳೂರಿನ ಮೆಟಲ್ ಲ್ಯಾಂಪ್ ಕ್ಯಾಪ್ಸ್ ಮಹಿಳಾ ಕಾರ್ಮಿಕರೇ ಸಾಕ್ಷಿಯಾಗಿದ್ದಾರೆ.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಶ್ರೀಯುತ ದೇವರಾಜ ಅರಸುರವರು ಓಟಿನ ಸಲುವಾಗಿ ವರ್ಗಯುದ್ಧದ ಬಗ್ಗೆಯೇ ಮಾತನಾಡಿದರೂ ಕಾರ್ಯರೂಪದಲ್ಲಿ ಬಂಡವಾಳಶಾಹಿ ಮತ್ತು ಜಮೀನ್ದಾರಿ ಪದ್ಧತಿಯನ್ನೇ ಎತ್ತಿ ಹಿಡಿಯುತ್ತಿದ್ದಾರೆ. ಇವರ ಸರ್ಕಾರ ತೋಟದಲ್ಲಿ ದುಡಿಯುವ ಮಹಿಳಾ ಕಾರ್ಮಿಕರನ್ನು ಎರಡನೇ ದರ್ಜೆ ಕಾರ್ಮಿಕರನ್ನಾಗಿ ಪರಿಗಣಿಸಿವೆ. ನಮ್ಮ ರಾಜ್ಯದಲ್ಲಿ ಸುಮಾರು ನಾಲ್ಕು ಲಕ್ಷ ಮಹಿಳಾ ಬೀಡಿ ಕಾರ್ಮಿಕರಿದ್ದಾರೆ. ಇವರ ಸ್ಥಿತಿಗತಿ, ಆರೋಗ್ಯ ಉತ್ತಮಪಡಿಸಲು, ಕಾಂಟ್ರಾಕ್ಟ್ ಪದ್ಧತಿಯನ್ನು ರದ್ದುಪಡಿಸಲು ಈ ಸರ್ಕಾರ ತಯಾರಿಲ್ಲ. ಲಕ್ಷಾಂತರ ಮಹಿಳಾ ಕಾರ್ಮಿಕರು ಕೃಷಿ ಕಾರ್ಮಿಕರಾಗಿ ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದರೂ ನೆರೆಯ ರಾಜ್ಯವಾದ ಕೇರಳದಲ್ಲಿ ಅವರಿಗೆ ಐದು ಗಂಟೆ ದುಡಿಮೆಗೆ ದಿನವೊಂದಕ್ಕೆ ಎಂಟು ರೂಪಾಯಿ ದೊರೆಯುತ್ತಿದ್ದಾಗ ನಮ್ಮ ರಾಜ್ಯಸರ್ಕಾರ ಇವರ ದಿನಗೂಲಿಯನ್ನು ಕೆಲಸದ ವೇಳೆಯನ್ನು ನಿಗಧಿಗೊಳಿಸದೆ ದಿನವೊಂದಕ್ಕೆ ಮೂರು ರೂ. ಗಳಿಂದ ನಾಲ್ಕು ರೂಪಾಯಿಗಳೆಂದು ನಿಗಧಿ ಮಾಡಿದೆ.

ನಮ್ಮ ರಾಜ್ಯದಲ್ಲಿ ಲಕ್ಷಾಂತರ ಮಹಿಳಾ ಕಾರ್ಮಿಕರು ಬಹಳ ಕಡಿಮೆ ಕೂಲಿಯಲ್ಲಿ ರೇಷ್ಮೆ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ರಾಜ್ಯ ಸರ್ಕಾರ ಕಳೆದ ಹತ್ತು ವರ್ಷ[illegible] ಕೂಲಿ ವಿಮರ್ಶೆ[illegible]

ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ಯಮಗಳಲ್ಲಿ, ಬ್ಯಾಂಕ್-ಇನ್ಷೂರೆನ್ಸ್ ಉದ್ಯಮಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಸಾವಿರಗಟ್ಟಲೆ ಹೆಣ್ಣು ಮಕ್ಕಳು ನಮ್ಮ ರಾಜ್ಯದಲ್ಲಿ ದುಡಿಯುತ್ತಿದ್ದಾರೆ. ಅದೇ ರೀತಿ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲೂ ಸಹ ದೊಡ್ಡ ಪ್ರಮಾಣದಲ್ಲಿ ಮಹಿಳಾ ಕಾರ್ಮಿಕರಿದ್ದಾರೆ. ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಮೇಲ್ಕಂಡ ಉದ್ಯಮಗಳಲ್ಲಿ ದುಡಿಯುವ ಮಹಿಳೆಯರಿಗೆ 'ಕ್ರೈಷೆ' ವ್ಯವಸ್ಥೆ ಮಾಡದಿರುವುದು ಸರ್ಕಾರದ ನಿರ್ಲಕ್ಷತೆಯನ್ನು ಎತ್ತಿ ತೋರಿಸುತ್ತದೆ. ಬಂಧುಗಳೇ ಸರ್ಕಾರದ ಮತ್ತು ಮಾಲೀಕರ ಧೋರಣೆಯಿಂದಾಗಿ ದುಡಿಯುವ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಈ ಅಂಶವನ್ನು ಕೇಂದ್ರ ಸರ್ಕಾರದ ಅಧಿಕಾರಿಗಳೇ ಒಪ್ಪಬೇಕಾಗಿದೆ. ಇದರಲ್ಲಿ ಸೋಜಿಗ ಸಂಗತಿಯೆಂದರೆ ಮಹಿಳೆಯರ ಉದ್ಯೋಗ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವ ಬದಲು ಹೆರಿಗೆ ಭತ್ಯದ ಭಾರ, ರಾತ್ರಿ ವೇಳೆಯಲ್ಲಿ ಮಹಿಳೆಯರ ದುಡಿಮೆಯ ಬಗ್ಗೆ ಇರುವ ನಿಷೇಧ ಮಾಲೀಕರುಗಳಿಗೆ ಹೊರಲಾರದ ಹೊರೆಯಾಗಿದೆಯೆಂದೂ ಈ ಬಗ್ಗೆ ಪುನರ್ ಯೋಜನೆ ಮಾಡಬೇಕೆಂಬ ಮಹಿಳಾ ಕಾರ್ಮಿಕ ನೀತಿಯನ್ನು ಬಹಿರಂಗವಾಗಿಯೇ ವ್ಯಕ್ತಪಡಿಸುತ್ತಿದ್ದಾರೆ.

ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ 'ಉದ್ಯೋಗ ವಿನಿಮಯ ಕಚೇರಿ'ಯಲ್ಲಿ ದಾಖಲೆಯಾಗಿರುವ ವಿದ್ಯಾವಂತ ಮಹಿಳಾ ನಿರುದ್ಯೋಗಿಗಳ ಸಂಖ್ಯೆ 1.6 ಮಿಲಿಯಗಳಾಗಿದ್ದರೆ ದಾಖಲೆಯಾಗದ ವಿದ್ಯಾವಂತ ಮಹಿಳೆಯರ ಸಂಖ್ಯೆ ಹಲವು ಮಿಲಿಯ. ದುಡಿಯುವ ಮಹಿಳೆಯರು ಒಂದೇ ಕಾರ್ಖಾನೆಗಳಲ್ಲಿ ಮಾಲೀಕರ ದಬ್ಬಾಳಿಕೆಯನ್ನು ಎದುರಿಸಬೇಕು. ಇನ್ನೊಂದೆಡೆ ಮನೆಯಲ್ಲಿ ಎಲ್ಲಾ ಜವಾಬ್ದಾರಿಯನ್ನು ಹೊತ್ತು ಗಂಡಂದಿರ ಬೈಗಳ, ಹೊಡೆತ, ಸಮಾಜದ ವಕ್ರದೃಷ್ಟಿ ಎದುರಿಸಬೇಕಾಗಿದೆ. ಪುರುಷರ ಪ್ರಾಧಾನ್ಯತೆಯಿರುವ ನಮ್ಮ ಭೂಮಾಲೀಕ-ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಹಿಳೆಯರು ಎಲ್ಲಾ ರೀತಿಯ ಶೋಷಣೆಗೆ ಒಳಗಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ದುಡಿಯುವ ಮಹಿಳೆಯರನ್ನು ಪ್ರಥಮವಾಗಿ ಸಂಘಟಿಸುವುದು, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವುದು, ಮಹಿಳೆಯರನ್ನು [illegible] ಚಳವಳಿ[illegible]ಲ್ಲೂ, ರಾಜಕೀಯದಲ್ಲೂ ಭಾಗವಹಿಸುವಂತೆ ಮಾಡುವುದು, ಮಹಿಳೆಯರ ನಾಯಕತ್ವವನ್ನು ಸಂಘಟನೆಗಳಲ್ಲಿ ಬೆಳೆಸುವುದು— ಈ ಎಲ್ಲಾ ಉದ್ದೇಶಗಳನ್ನಿರಿಸಿ ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮ್ಮೇಳನವನ್ನು ಸಿ.ಐ.ಟಿ.ಯು. ನಡೆಸಲು ಮುಂದಾಗಿದೆ. ದುಡಿಯುವ ಮಹಿಳೆಯರ ಬಗೆ[illegible] ಯಿಂದ ಇದ್ದು ದು[illegible] ರನ್ನು ಸಂ[illegible]

ಬಂಡಾಯ ಸಾಹಿತಿಗಳು ಸಾಹಿತ್ಯದ ಆಯುಧ ಹಿಡಿದ ನಾಗರಿಕ ಸೇನೆಯಾಗಲಿ - ಪರುಳೇಕರ್ ಕರೆ

(ನಮ್ಮ ವರದಿಗಾರರಿಂದ)

ರಾಜ್ಯದಲ್ಲಿನ ಎಲ್ಲ ಪ್ರಗತಿಪರ ಸಾಹಿತಿಗಳು ಸಾಹಿತ್ಯದ ಆಯುಧವನ್ನು ಹಿಡಿದ ನಾಗರೀಕ ಸೇನೆಯಾಗಲಿ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕಿ ಶ್ರೀಮತಿ ಗೋದಾವರಿ ಪರುಳೇಕರ್ ಇಂದಿಲ್ಲಿ ಕರೆ ನೀಡಿದರು.

ಶ್ರೀಮತಿ ಪರುಳೇಕರ್ ಅವರು ಬೆಂಗಳೂರು ನಗರದಲ್ಲಿ ಮಾರ್ಚ್ 10 ಮತ್ತು 11ರಂದು ನಡೆದ 'ಬಂಡಾಯ ಸಾಹಿತ್ಯ ಸಮ್ಮೇಳ'ನದ ಮುಕ್ತಾಯ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ತಾವು ಹಿಂದೆ ಸಕ್ರಿಯವಾಗಿ ಪಾಲ್ಗೊಂಡಿದ್ದ ಭಾರತ ಪ್ರಗತಿಪರ ಲೇಖಕರ ಸಂಘವು ವಿವಿಧ ಪಂಥವಾದಿಗಳ ಸಂಕುಚಿತ ನಿಲುವಿನಿಂದಾಗಿ ಒಡೆದುಹೋದದನ್ನು ನೆನಪುಮಾಡಿಕೊಟ್ಟ ಗೋದಾವರಿಯವರು. ಕರ್ನಾಟಕದ ಬಂಡಾಯಗಾರ ಲೇಖಕರಲ್ಲಿ ಹೀಗಾಗದಿರಲಿ ಎಂದು ಆಶಿಸಿ ಎಲ್ಲ ಬಂಡಾಯಗಾರರ ಮತ್ತು ಪುರೋಗಾಮಿಗಳ ವಿಶಾಲ ವೇದಿಕೆ ಇದಾಗಲಿ ಎಂದು ವಿನಂತಿಸಿದರು.

ಸಮಾಜ ಬದಲಾವಣೆಗೆ ಶಸ್ತ್ರ ಹಿಡಿದ ಸೈನ್ಯ ಮತ್ತು ಪ್ರಗತಿಗಾಮಿ ಸಾಹಿತ್ಯದ ಶಸ್ತ್ರ ಹಿಡಿದ ಸೈನ್ಯ ಎಂಬ ಎರಡು ಬಗೆಯ ಸೈನ್ಯದ ಅಗತ್ಯವಿದೆ ಎಂದ ಮಾರ್ಕ್ಸಿಸ್ಟ್ ನಾಯಕಿ, ಸಾಹಿತ್ಯದ ಆಯುಧ ಹಿಡಿದ ಸೇನೆಯಾಗಿ ಬಂಡಾಯ ಬರಹಗಾರರು ಬೆಳೆದು ಬರಬೇಕೆಂದರು.

ಉತ್ತಮ ಸಾಹಿತ್ಯಕ್ಕೆ ಮೂಲ ಸೆಲೆ ಇರುವುದು ಜನತೆಯ ಬದುಕಿನ ನಡುವೆ ಎಂದ ಅವರು ಜನಜೀವನದ ನಡುವೆ ಹೋಗಿ ಅವರ ಬದುಕಿನ ವಾಸ್ತವ ಸ್ಥಿತಿಗಳನ್ನು ಚಿತ್ರಿಸಿ ಎಂದು ಕರೆ ನೀಡಿದರು. ಹೀಗೆ ಬದುಕಿನ ವಾಸ್ತವ ಚಿತ್ರಣವನ್ನು ನೀಡಬೇಕಾದಾಗ ರಾಜ್ಯಶಕ್ತಿಯು ನಿಮ್ಮ ಮೇಲೆ ಬೀಳುತ್ತದೆ-ಯಾಕೆಂದರೆ ವರ್ಗಗಳಿರುವ ಸಮಾಜದಲ್ಲಿ ಮುಕ್ತ ಲೇಖನ ಸ್ವಾತಂತ್ರ್ಯ ಇಲ್ಲ ಎಂದು ಅವರು ಹೇಳಿದರು. ಆದರೂ ಎದೆಗುಂದಬೇಡಿ ಎಂದು ಧೈರ್ಯ ತುಂಬಿದ ಗೋದಾವರಿಯವರು ಕಾಲ ಬದಲಾಗುತ್ತದೆ ಎಂಬುದಕ್ಕೆ ತಮ್ಮದೇ ಅನುಭವಗಳನ್ನು ಉದಾಹರಣೆಯಾಗಿ ಕೊಟ್ಟರು.

1945-50ರ ಸಮಯದಲ್ಲಿ ಮಹಾರಾಷ್ಟ್ರ ಆದಿವಾಸಿ ಬಡಜನತೆಯ ಹಕ್ಕುಗಳಿಗಾಗಿ ತಾವು ಮಾಡಿದ ಹೋರಾಟಕ್ಕಾಗಿ ತಮ್ಮನ್ನು ರಕ್ಕಸಿ ಎಂದೆಲ್ಲಾ ಚಿತ್ರಿಸಿದ ಪತ್ರಿಕೆಗಳು ಈಗ ತಮ್ಮನ್ನು ಆದಿವಾಸಿ ಜನರ ಹಕ್ಕುಗಳಿಗಾಗಿ ಹೋರಾಡಿದ ಧೀರ ಮಹಿಳೆ ಎಂದು ಬಣ್ಣಿಸುತ್ತಿವೆ ಎಂದರು. ಆದಿವಾಸಿ ಜನತೆಯ ಹಕ್ಕುಬಾಧ್ಯತೆಗಳಿಗಾಗಿ ತಾವು ಮಾಡಿದ ಹೋರಾಟಕ್ಕೆ ಆರು ವರ್ಷಗಳ ಕಾಲ ಥಾಣಾ (ಮಹಾರಾಷ್ಟ್ರ) ಜಿಲ್ಲೆಯಿಂದ ಗಡೀಪಾರು ಮಾಡಿದ ಸರ್ಕಾರವೇ ಆ ಹೋರಾಟದ ಇತಿಹಾಸ ಕುರಿತು ತಾವು ಬರೆದ ಪುಸ್ತಕಕ್ಕೆ ಅಕಾಡೆಮಿ ಪ್ರಶಸ್ತಿ ಕೊಟ್ಟಿದೆ ಎಂದರು.

ಸಾಹಿತಿಯು ಜನತೆಯ ಹೋರಾಟದ ನಡುವೆ ಇದ್ದರೆ ಹೆಚ್ಚು ಸಮರ್ಥಶಾಲಿಯಾಗಿ ಬದುಕನ್ನು ಚಿತ್ರಿಸಬಲ್ಲ ಎಂದು ಹೇಳಿದ ಪರುಳೇಕರ್ ಅವರು ಸಾಹಿತ್ಯ ಕೃತಿಯು ಉತ್ತಮ ಕಲಾಕೃತಿಯೂ ಆಗಿರಬೇಕು ಎಂದರು. ಉತ್ತಮ ಕಲಾಕೃತಿಗಳನ್ನು ಕೊಟ್ಟ ಹಿಂದಿನವರಲ್ಲಿ ಅನುಸರಿಸಬೇಕಾದ್ದನ್ನು ಯುವ ಸಾಹಿತಿಗಳು, ಅನುಸರಿಸಬೇಕು ಎಂದ ಅವರು ಷೇಕ್ಸ್‌ಪಿಯರನ ಕಲಾಕೃತಿಗಳ ಸಾರ್ವಕಾಲಿಕತೆಯನ್ನು ಯುವ ಸಾಹಿತಿಗಳು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದರು.

ಯುವ ಸಾಹಿತಿಗಳು ಮತ್ತು ಯುವ ಜನರು ಕಿಕ್ಕಿರಿದು ತುಂಬಿದ್ದ ಸಭೆಯನ್ನು ಉದ್ದೇಶಿಸಿ ಸುಮಾರು 50 ನಿಮಿಷಗಳ ಕಾಲ ಮಾತನಾಡಿದ ಗೋದಾವರಿಯವರು ತಾವು ಸಮಾಜಸೇವಾ ಸಂಘ, ಸ್ಕೌಟ್ಸ್, ಸಾಹಿತ್ಯಸಂಘ, ಭ್ರಷ್ಟಾಚಾರ ವಿರೋಧಿ ಸಂಘ, ಜಾತಿವಿನಾಶ ಸಂಘ, ಆತ್ಮಹತ್ಯೆ ವಿರೋಧಿ ಸಂಘ ಮುಂತಾದ ಎಲ್ಲ ಸಂಘ ಸಂಸ್ಥೆಗಳಲ್ಲಿಯೂ ದುಡಿದಿದ್ದೇನೆ, ಆದರೆ, ಇವೆಲ್ಲವುಗಳಿಂದ ಭ್ರಮನಿರಸನಗೊಂಡೆ ಎಂದು ಹೇಳಿದರು. ಯಾಕೆಂದರೆ ಇವಾವುವೂ ಸಮಾಜದಲ್ಲಿನ ಸಮಸ್ಯೆಗಳಿಗೆ ಪರಿಹಾರವಲ್ಲ ಎಂಬುದು ಅವರ ಅನುಭವ. ಇನ್ನು ಸ್ವಲ್ಪ ಸಮಯದಲ್ಲೇ ಪೂರ್ಣಗೊಳಿಸಲಿರುವ "ನಾನೇಕೆ ಕಮ್ಯುನಿಸ್ಟಳಾದೆ" ಎಂಬ ಪುಸ್ತಕದಲ್ಲಿ ಈ ಎಲ್ಲ ವಿಷಯಗಳನ್ನು ವಿವರವಾಗಿ ಚರ್ಚಿಸಿದ್ದೇನೆ ಎಂದರು. ಜನ ಸಾಮಾನ್ಯರ ಉತ್ತಮ ಬದುಕಿಗಾಗಿ ತಾವು ಮಾಡಿದ ಹೋರಾಟಗಳಿಗಾಗಿ 9 ವರ್ಷಗಳ ಕಾಲ ದೀರ್ಘಕಾಲದ ಸೆರೆಮನೆವಾಸ ಅನುಭವಿಸಿರುವ ನನಗೆ ಅಲ್ಲಿ ಕಳ್ಳರು, ವೇಶ್ಯೆಯರು, ಕೊಲೆಗಾರರು, ಜೇಬುಗಳ್ಳರು ಮುಂತಾದವರ ಪರಿಚಯವಾದ್ದರಿಂದ ಅವರನ್ನು ಕುರಿತೂ ಒಂದು ಕೃತಿ ರಚನೆಯಲ್ಲಿ ತೊಡಗಿದ್ದೇನೆ ಎಂದು ಹೇಳಿದರು.

ಸಮಾಜವಾದದಿಂದ ಮಾತ್ರ ಮಹಿಳೆಗೆ ವಿಮೋಚನೆ

ನಮ್ಮ ನಾಡಿನ ಬಹುಪಾಲು ಮಹಿಳೆಯರು ಇಂದೂ ಸಹ ಗುಲಾಮರಂತೆ ಬಾಳ್ವೆ ನಡೆಸಬೇಕಾಗಿದೆ ಎಂದು ನೊಂದು ನುಡಿದ ಗೋದಾವರಿಯವರು ಗ್ರಾಮೀಣ ಮಹಿಳೆಯರಂತೂ ಹೊರಗಡೆ ಹೊಲಗದ್ದೆಗಳ ಕೆಲಸ-ಒಳಗಡೆ ಮನೆ ಮಕ್ಕಳನ್ನು ಸುಧಾರಿಸುವಂತಹ ವಿಪರೀತ ಕೆಲಸದ ಭಾರದಿಂದ ಸೋತು ಜೀವಂತ ಶವಗಳಂತೆ ಕಾಣುತ್ತಾರೆ ಎಂದರು.

ಮಹಿಳೆಯರು ಗರ್ಭಿಣಿಯರಾಗುವುದರಿಂದ ಹೆರಿಗೆ ಮತ್ತು ನಂತರದ ಸಮಯದಲ್ಲಿ ಕೆಲಸಕ್ಕೆ ಬರುವುದಿಲ್ಲ ಎಂಬ ಕಾರಣದಿಂದಾಗಿ ನಗರಗಳಲ್ಲಿನ ಎಷ್ಟೋ ಕಾರ್ಖಾನೆಗಳು ಮಹಿಳೆಯರಿಗೆ ಕೆಲಸ ನಿರಾಕರಿಸುತ್ತಿರುವ ದೃಷ್ಟಾಂತಗಳನ್ನು ವಿವರಿಸಿ ಖಂಡಿಸಿದ ಪರುಳೇಕರ್ ಅವರು ಮಹಿಳೆ ಗರ್ಭಿಣಿಯಾಗುವುದು ಸಾಮಾಜಿಕ ಅಪರಾಧವೆ ಎಂದು ಪ್ರಶ್ನಿಸಿದರು.

ಇತ್ತೀಚೆಗೆ ತಾವು ಭೇಟಿಕೊಟ್ಟು ಬಂದ ಕೊರಿಯಾದಂತಹ ಸಮಾಜವಾದಿ ದೇಶಗಳಲ್ಲಿ ಮಹಿಳೆಯರು ಕೇವಲ 8 ಗಂಟೆಗಳು ಮಾತ್ರ ದುಡಿಯುತ್ತಾರೆ, ಹೆರಿಗೆ ಸಮಯದಲ್ಲಿ ಅವರಿಗೆ 4 ತಿಂಗಳು ಸಂಬಳಸಹಿತ ರಜೆ ಸಿಕ್ಕುತ್ತದೆ ಮತ್ತು ಮಕ್ಕಳ ಲಾಲನೆ ಪಾಲನೆಗಾಗಿ ಆ ದೇಶದ ಎಲ್ಲ ಕಡೆ ನರ್ಸರಿ ಶಾಲೆಗಳಿವೆ ಎಂದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡ ಕಾಂ|| ಎನ್.ಎಲ್. ಉಪಾಧ್ಯಾಯ ಅವರು ಆರಂಭದಲ್ಲಿ ಗೋದಾವರಿ ಪರುಳೇಕರ್ ಅವರ ಪರಿಚಯ ಮಾಡಿಕೊಟ್ಟರು. ಶ್ರೀ ಬರಗೂರು ರಾಮಚಂದ್ರಪ್ಪ ವಂದಿಸಿದರು.

ಚೀನಾ ತನ್ನ ಸೈನ್ಯವನ್ನು ಕೂಡಲೇ ಹಿಂತೆಗೆಯಲಿ, ವಿಯಟ್ನಾಂನೊಂದಿಗೆ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಲಿ

ಸಮಾಜವಾದಿ ಚೀನಾದ ಬೃಹತ್ ಸೇನೆಗಳು, ವಿಯಟ್ನಾಂ ತನ್ನ ಗಡಿಯುದ್ದಕ್ಕೂ ಪ್ರಚೋದನಾತ್ಮಕ ಹಾಗೂ ದುರುದ್ದೇಶದಿಂದ ಕೂಡಿದ ಸೈನಿಕ ಚಟುವಟಿಕೆಗಳನ್ನು ನಡೆಸುತ್ತಿದೆಯೆಂಬ ನೆಪ ಮಾಡಿಕೊಂಡು ಸಮಾಜವಾದಿ ವಿಯಟ್ನಾಂ ಮೇಲೆ ಆಕ್ರಮಣ ನಡೆಸಿರುವುದು ಖಂಡನೀಯ ಹಾಗೂ ದಿಗ್ಭ್ರಮೆಗೊಳಿಸಿರುವ ಕೃತ್ಯವಾಗಿದೆ.

800ರಿಂದ 900 ಮಿಲಿಯ ಜನಸಂಖ್ಯೆಯನ್ನು ಹೊಂದಿರುವ ಒಂದು ದೇಶ ತನ್ನ ನೆರೆಯಲ್ಲಿರುವ ಕೇವಲ 50 ಮಿಲಿಯ ಜನಸಂಖ್ಯೆಯನ್ನು ಹೊಂದಿರುವ ದೇಶದ ಮೇಲೆ ಆಕ್ರಮಣ ನಡೆಸುವುದು ಒಂದು ಅಪರಾಧವಾದರೆ, ಜನತಾ ಚೀನಾದಂಥ ಬಲಿಷ್ಠ ಸಮಾಜವಾದಿರಾಷ್ಟ್ರ, ಸಮಾಜವಾದಿ ವಿಯಟ್ನಾಂನಂಥ ಪುಟ್ಟ ರಾಷ್ಟ್ರದ ಮೇಲೆ ಪೂರ್ಣ ಪ್ರಮಾಣದ ಯುದ್ಧ ಹೂಡಿರುವುದು ಮತ್ತೊಂದು ದೊಡ್ಡ ಅಪರಾಧ.

ಕಾಂಬೋಡಿಯಾದ ಜನತಾ ವಿರೋಧಿ ಕ್ರೂರ ಪೋಲ್‌ಪೋಟ್ ಸರಕಾರವನ್ನು ಉರುಳಿಸಲು ವಿಯಟ್ನಾಂ [illegible] ನಡೆಸುತ್ತಿದೆಯೆಂಬ ಆರೋಪವಾಗಲೀ, ವಿಯಟ್ನಾಂನಲ್ಲಿರುವ ಚೀನೀಯರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬುದಾಗಲೀ, ವಿಯಟ್ನಾಂ ಚೀನಾ ಗಡಿಯಲ್ಲಿ ಪ್ರಚೋದನಾತ್ಮಕ ಚಟುವಟಿಕೆಯಲ್ಲಿ ತೊಡಗಿದೆ ಎಂಬುದಾಗಲೀ, ವಿಯಟ್ನಾಂ ಆಗ್ನೇಯ ಏಷಿಯಾದಲ್ಲಿ ಸೋವಿಯತ್ ರಷ್ಯಾದ ಕೈಗೊಂಬೆಯಾಗಿ ಇಂಡೋ-ಚೀನಾ ರಾಷ್ಟ್ರಗಳಾದ ಲಾವೋಸ್, ಕಾಂಬೋಡಿಯಾ ಮುಂತಾದ ದೇಶಗಳನ್ನು ಆಕ್ರಮಿಸುವ ಉದ್ದೇಶ ಹೊಂದಿದೆ ಎಂಬ ಆಪಾದನೆಗಳಾಗಲೀ ಯಾವುವೂ ಚೀನಾ ವಿಯಟ್ನಾಂ ಮೇಲೆ ನಡೆಸಿರುವ ಆಕ್ರಮಣವನ್ನು ಸಮರ್ಥಿಸುವುದಿಲ್ಲ.

ಚೀನಾದ ಭಾರೀ ಸೇನಾ ಕಾರ್ಯಾಚರಣೆಯಿಂದ ಸಮಾಜವಾದಿ ವಿಯಟ್ನಾಂಗೆ ಪ್ರಾಣ-ಆಸ್ತಿ ನಷ್ಟವಾಗಿದೆಯಲ್ಲದೆ ಆರ್ಥಿಕವಾಗಿಯೂ ಕಷ್ಟವನ್ನನುಭವಿಸಬೇಕಾಗಿದೆ. ಆದರೆ, ಸಮಾಜವಾದಿ ಚೀನಾ ತನ್ನ ಕಾರ್ಯಾಚರಣೆಯಿಂದಾಗಿ ಇದಕ್ಕೂ ನೂರು[illegible] ಇತರೆ ರಾಷ್ಟ್ರಗಳ ಮುಂದೆ ತನ್ನ ರಾಜಕೀಯ ಪ್ರತಿಷ್ಠೆಯನ್ನು ಕಳೆದುಕೊಂಡಿರುವುದಲ್ಲದೆ, ತಾನೊಂದು ಸಮಾಜವಾದಿ ರಾಷ್ಟ್ರವೆಂದು ಸಮರ್ಥಿಸಿಕೊಳ್ಳಲೂ ಅಸಮರ್ಥವಾಗಿದೆ. ಆದ್ದರಿಂದ, ಚೀನಾ ಕೂಡಲೇ ತನ್ನ ಸೈನಿಕರನ್ನು ವಿಯಟ್ನಾಂ ನೆಲದಿಂದ ವಾಪಸು ಕರೆಸಬೇಕು. ಇಂದಿನ ರಾಜಕೀಯ ಹಾಗೂ ವರ್ಗ ವಿಂಗಡಣೆಯಲ್ಲಿ, ಪ್ರಪಂಚದ ಯಾವ ದೇಶವೂ ಸಾಮ್ರಾಜ್ಯವಾದಿ [illegible]ಗಿಸುವಂತಿಲ್ಲ.

ರಾಷ್ಟ್ರೀಯ ವಿಮೋಚನೆಯಲ್ಲಿ ಚೀನಾ ನಡೆಸಿದ ಧೀರೋದಾತ್ತ ಹೋರಾಟ, ತ್ಯಾಗ, ಮತ್ತು 800 ಮಿಲಿಯ ಜನತೆಯನ್ನು ಸಮಾಜವಾದಿ ಪಥದತ್ತ ಒಯ್ದು ಅದರ ಸಾಧನೆಗಳನ್ನು ಪ್ರಶಂಸಿಸುತ್ತಿದ್ದ ಅದರ ಅನೇಕ ಅಭಿಮಾನಿಗಳಿಗೆ, ಕಳೆದ ಒಂದು ದಶಕದಿಂದ ಚೀನೀ ನಾಯಕರು ಮಾಡುತ್ತಿರುವ ಕೆಲಸಗಳಿಂದ ಹಾಗೂ ಹೇಳಿಕೆಗಳಿಂದ ಬೇಸರ, ಭಿನ್ನಾಭಿಪ್ರಾಯಗಳನ್ನು ಉಂಟುಮಾಡಿದೆ. ಚೀನಾದ ಸೋವಿಯತ್ ವಿರೋಧಿ ನಿಲುವು ರಾಜಕೀಯ-ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದ ಕೂಡಿರುವುದಲ್ಲದೆ, ಸಾಮ್ರಾಜ್ಯವಾದಿಗಳಿಗೆ ಪ್ರಾಣದಾನ ನೀಡುವಂತಹದಾಗಿದೆ, ತೀರಾ ಹಿಂದುಳಿದ ದೇಶವೊಂದನ್ನು ಆಧುನಿಕ ಸಮಾಜವಾದಿ ದೇಶವನ್ನಾಗಿ ಪರಿವರ್ತಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ಚೀನಾ ತನ್ನ ಕೃತ್ಯಗಳಿಂದ ಸ್ನೇಹಿತರನ್ನು ಕಳೆದುಕೊಳ್ಳುತ್ತಿದೆ. ಚೀನಾದಲ್ಲಿ ಆಗುತ್ತಿರುವ ತೀವ್ರಗತಿಯ ಬದಲಾವಣೆಗಳು, ಕಳೆದ ದಶಕದಲ್ಲಿ ರಾಜಕೀಯ ಸೂತ್ರಗಳನ್ನು ಹಿಡಿದಿದ್ದ "ದುಷ್ಟಕೂಟ"ದವರು ಮಾಡಿದ ತಪ್ಪುಗಳನ್ನು ಸರಿಪಡಿಸುವ ಯತ್ನ, ಅಮೇರಿಕವನ್ನು ರಾಜಕೀಯ ಬಾಂಧವ್ಯವನ್ನು ಚೀನಾದೊಂದಿಗೆ ಸ್ಥಾಪಿಸುವಂತೆ ಮಾಡಿದ ರಾಜಕೀಯ ಒತ್ತಡ, ಹಾಗೆಯೇ ಇತರೆ ದೇಶಗಳೊಂದಿಗೆ [illegible] ರಾಜತಾಂತ್ರಿಕ ಸಂಬಂಧದ ಸಮಿತಿಯಲ್ಲಿ [illegible]ವಾಗಿ ಸಿಕ್ಕಿದ ಸ್ಥಾನ ಹಾಗೂ [illegible]ರಿಂದ 1976 ರವರೆಗೆ ತಿರಸ್ಕರಿಸಿದ್ದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಅಲ್ಲಿಯ ಜನತೆಗೆ ಕೊಟ್ಟಿದ್ದು, ಇವುಗಳ ಬಗ್ಗೆ ಚೀನಾದ ಅಭಿಮಾನಿಗಳಿಗೆ ಸಮಾಧಾನದ ಉಸಿರು ಬಿಡುವಂತೆ ಮಾಡಿತ್ತು.

ಈ ಎಲ್ಲಾ ಅಭಿಮಾನಿಗಳು, ಚೀನಾ ತನ್ನ ಅಪಾಯಕಾರಿ ಸಿದ್ಧಾಂತಗಳಾದ "ಸೋವಿಯತ್ ಯೂನಿಯನ್ ಸಮಾಜವಾದಿ - ಸಾಮ್ರಾಜ್ಯವಾದಿ ರಾಷ್ಟ್ರ ಹಾಗೂ ಮಾನವತೆಯ ಪ್ರಥಮ ಶತ್ರು" ಮುಂತಾದವು ಹಾಗೂ ಜಗತ್ತಿನಲ್ಲಿ ರಷ್ಯ ವಿರೋಧಿ ರಂಗವನ್ನು ಕಟ್ಟಲು ಅಮೇರಿಕ, ಜಪಾನ್ ಮತ್ತು ಪಾಶ್ಚಿಮಾತ್ಯ ಶಕ್ತಿರಾಷ್ಟ್ರಗಳೊಂದಿಗೆ ಒಪ್ಪಂದಕ್ಕೆ ಬರಬೇಕೆಂಬ ನಿಲುವುಗಳನ್ನು ತೊರೆಯುತ್ತದೆಂಬ ಆಶಾಭಾವನೆಗಳನ್ನು ಇಟ್ಟುಕೊಂಡಿದ್ದರು. ಆದರೆ ಅದನ್ನು ನುಚ್ಚುನೂರು ಮಾಡುವಂತೆ ಸಮಾಜವಾದಿ ವಿಯಟ್ನಾಂ ಮೇಲೆ ಆಕ್ರಮಣ ನಡೆಸಿದೆ. ಚೀನಾ ಕೂಡಲೇ ಯಾವ ಪೂರ್ವಭಾವಿ ಷರತ್ತಿಲ್ಲದೆ ತನ್ನ ಸೈನ್ಯಗಳನ್ನು ವಿಯಟ್ನಾಂನಿಂದ ವಾಪಸು ಕರೆಯಬೇಕೆಂಬುದು ಚೀನೀ ಸ್ನೇಹಿತರ ಆಗ್ರಹ.

ಯಾವ ಸಾಮ್ರಾಜ್ಯವಾದಿಗಳನ್ನು ಇಂಡೋ-ಚೈನಾ ಪ್ರದೇಶಗಳಿಂದ ಓಡಿ[illegible] ದಶಕಗಳ ಕಾಲ ಅಲ್ಲಿಯ ಜನತೆ [illegible]ಕನ್ ಸಾಮ್ರಾಜ್ಯಶಾಹಿಗಳು ಮಾಡಿ ಹಾಕುವುದಕ್ಕೆ ಆಸ್ಪದ ನೀಡಬಾರದೆಂಬುದೇ ನಮ್ಮ ಮನವಿ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿಯು 1978ರ ಡಿಸೆಂಬರ್ 27 ರಿಂದ 31ರ ವರೆಗೆ ಪಶ್ಚಿಮಬಂಗಾಳದ ಹೌರಾದಲ್ಲಿ ಸೇರಿದ್ದ ಪ್ಲೀನಮ್ ಸಭೆಯಲ್ಲಿ, ಸಂಘಟನೆಯ ಬಗ್ಗೆ ಅಂಗೀಕರಿಸಿದ ಗೊತ್ತುವಳಿ

ಸಂಘಟನಾತ್ಮಕ ಪರಿಸ್ಥಿತಿಯನ್ನು ಮತ್ತು ಕೊರತೆಗಳು ಮತ್ತು ದೌರ್ಬಲ್ಯಗಳನ್ನು ಕುರಿತು ಚರ್ಚಿಸುತ್ತಾ, ಪರಿವೀಕ್ಷಣೆಯಲ್ಲಿರುವ ವರ್ಷಗಳಲ್ಲಿ ಪಕ್ಷವು ಸೈದ್ಧಾಂತಿಕ ಮತ್ತು ರಾಜಕೀಯ ರಂಗಗಳಲ್ಲಿ ಸಾಧಿಸಿದ ಗಮನಾರ್ಹ ಸಾಧನೆಗಳನ್ನು ಪ್ಲೀನಮ್ ಅವಲೋಕಿಸಿತು.

ಮಧುರೈ ಅಧಿವೇಶನವಾದ ನಂತರ ಪಕ್ಷವು ಕೈಗೊಂಡ ರಾಜಕೀಯ ನೀತಿಯ ಕಾರ್ಯಾಚರಣೆಯನ್ನು ಪಕ್ಷದ ಜಲಂಧರ್ ಅಧಿವೇಶನವು ಅನುಮೋದಿಸಿತು. ಆದರೆ ಅದರ ದೌರ್ಬಲ್ಯಗಳು ಮತ್ತು ಹೊಯ್ದಾಟಗಳನ್ನು ಗಮನಿಸಿ ಅವನ್ನು ನಿವಾರಿಸಿತು. ಹಾಗೆಯೇ, ಭಾರತದಾದ್ಯಂತ ಪಕ್ಷದ ರಾಜಕೀಯ ಪ್ರಭಾವ ಮತ್ತು ಗೌರವಗಳು ಹೆಚ್ಚುತ್ತಿರುವುದನ್ನು ಗಮನಿಸಿತು. ಈ ಅಂಶವು, ಪಕ್ಷದ ಸಂಘಟನೆಯ ವಿಸ್ತರಣೆಯಲ್ಲಿ ಮತ್ತು ಅದನ್ನು ವಿಶಾಲ ರಂಗಗಳಿಗೆ ಹರಡುವುದರಲ್ಲಿ ಅನುಕೂಲಕರವಾಗಿದೆ.

2. ಸದ್ಯದ ಸಂಘಟನಾ ಪರಿಸ್ಥಿತಿಯನ್ನು ಗಮನಿಸಿದ ಪ್ಲೀನಮ್, 1964ರಲ್ಲಿ ಪರಿಷ್ಕರಣವಾದಿಗಳ ಜೊತೆ ಉಂಟಾದ ಒಡಕು ಮತ್ತು 1968ರಲ್ಲಿ ಎಡ ಸಾಹಸವಾದಿಗಳಿಂದ ಆದ ಕೆಡಕು, ಇವೆರಡೂ ಅನೇಕ ರಾಜ್ಯಗಳಲ್ಲಿ ಪಕ್ಷದ ಸಂಘಟನೆಯನ್ನು ತೀವ್ರವಾಗಿ ಘಾಸಿಗೊಳಿಸಿದೆ ಮತ್ತು ಈಗ ಪಕ್ಷವು ರಾಜಕೀಯವಾಗಿ, ಸಂಘಟನಾತ್ಮಕವಾಗಿ ತಳದಿಂದ ಬಲಪಡಿಸಿಕೊಳ್ಳಬೇಕು, ಮತ್ತು ಹೊಸ ಕೆಲಸ ಕಾರ್ಯಗಳನ್ನು ಮಾಡಿ ಜನತೆಯ ಜೊತೆ ಸಂಬಂಧವನ್ನು ಪುನಃ ಸ್ಥಾಪಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿತು.

3. ಹಾಗೆಯೇ, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಎರಡು ದೊಡ್ಡ ಪಕ್ಷಗಳಾದ ಸೋವಿಯತ್ ಯೂನಿಯನ್ನಿನ ಕಮ್ಯುನಿಸ್ಟ್ ಪಕ್ಷ ಮತ್ತು ಚೀನಾದ ಕಮ್ಯುನಿಸ್ಟ್ ಪಕ್ಷ ಇವೆರಡರ ನಾಯಕತ್ವಗಳೊಡನೆ ಪಕ್ಷವು ತೀವ್ರ ಹೋರಾಟ ನಡೆಸಬೇಕಾಯಿತು. ಇವೆರಡೂ ಕ್ರಮವಾಗಿ ಬಲಪರಿಷ್ಕರಣವಾದಿ ಮತ್ತು ಎಡ ಸಾಹಸವಾದಿ ವಿಭಾಗಗಳನ್ನು ವ್ಯಕ್ತಪಡಿಸುತ್ತವೆ. ಈ ಹೋರಾಟವು ನಕ್ಸಲೀಯರಿಗೆ ಸಂಬಂಧಿಸಿದ ಹಾಗೆ ಕೇವಲ ಸೈದ್ಧಾಂತಿಕ ರಂಗಕ್ಕೆ ಮಾತ್ರ ಮೀಸಲಾಗಿರಲಿಲ್ಲ. ಇದು [illegible]ಪಂದದೆ. ನಮ್ಮ ಮೇಲೆ ನಡೆಸುವ ಕೊಲೆಪಾತಕ ಆಕ್ರಮಣಗಳಲ್ಲಿ ಪರಿಷ್ಕರಣವಾದಿಗಳ ಕೈವಾಡವೂ ಇದೆ. ಒಂದು ಕಾಲಕ್ಕೆ ಪಕ್ಷದ ಮೇಲೆ ತೀವ್ರವಾದ ಭೀಕರ ಆಕ್ರಮಣಗಳನ್ನು ನಡೆಸಲಾಯಿತು. ಪಕ್ಷದ ಕೇಂದ್ರವು ತನ್ನ ಗಮನವನ್ನು ಈ ಕಡೆಗೆ ಕೇಂದ್ರೀಕರಿಸಿದಾಗ, ಇವುಗಳನ್ನು ಎದುರಿಸಿ ಹಿಮ್ಮೆಟ್ಟಿಸಿ, ವಿನಾಶವನ್ನು ತಪ್ಪಿಸಲಾಯಿತು.

4. ಪಕ್ಷದ ಕೇಂದ್ರ ಸಮಿತಿ ಮತ್ತು ಪಾಲಿಟ್‌ಬ್ಯೂರೋಗಳು ಪಕ್ಷದ ಸದಸ್ಯರಿಗೆ ಶಿಕ್ಷಣ ನೀಡುವಲ್ಲಿ ಶ್ರಮಪೂರ್ವಕ ಪ್ರಯತ್ನಗಳನ್ನು ಮಾಡಿದ ನಂತರ ಪಕ್ಷದ ಸೈದ್ಧಾಂತಿಕ ರಂಗದಲ್ಲಿ ಜಯ ದೊರೆತು 1968ರ ಬರ್ದ್ವಾನ್ ಪ್ಲೀನಮ್ ಸಫಲವಾಗಿದೆ. ಆದರೆ ಈ ಹೋರಾಟ ಅಲ್ಲಿಗೇ ನಿಲ್ಲಲಿಲ್ಲ. ಈ ಎರಡು ಅಡ್ಡದಾರಿಗಳ ವಿರುದ್ಧ ಭರವಸೆಯಿಂದ ಹೋರಾಟ ನಡೆಸಲು ಪಕ್ಷಕ್ಕೆ ಈ ಪ್ಲೀನಮ್‌ನಿಂದ ಬೆಂಬಲ ದೊರೆಯಿತು. 1968ರ ನಂತರ ಈ 2 ಪಕ್ಷಗಳ ಸೈದ್ಧಾಂತಿಕ ಆಕ್ರಮಣಗಳನ್ನು ತಡೆಯಲು ಪಕ್ಷದ ಒಳಗಡೆಯೇ ನಿರಂತರ ಹೋರಾಟ ನಡೆಸಬೇಕಾಯಿತು. ಈ ಸಾಧನೆಯನ್ನು ಪ್ಲೀನಮ್ ಮುಖ್ಯವಾಗಿ ಗಮನಿಸುತ್ತದೆ. ಏಕೆಂದರೆ ಈ ದೊಡ್ಡ ಸಾಧನೆ ಆಗದಿದ್ದರೆ ನಮ್ಮ ಪಕ್ಷಕ್ಕೆ ಸ್ವತಂತ್ರ ಅಸ್ತಿತ್ವವೇ ಇರುತ್ತಿರಲಿಲ್ಲ.

5. ಈ ನಂತರದ ಅವಧಿಯು, ಭಾರತದ ರಾಜಕೀಯದಲ್ಲಿ ಬಿರುಗಾಳಿಯ ಬೆಳವಣಿಗೆಯ ದಿನಗಳು. ಇದು, ಪಕ್ಷದ ಸ್ವಾತಂತ್ರ್ಯ, ಸಿದ್ಧಾಂತ ಮತ್ತು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತಿಳುವಳಿಕೆಗಳನ್ನು ತೀಕ್ಷ್ಣವಾಗಿ ಪರೀಕ್ಷೆಗೆ ಗುರಿಪಡಿಸಿತು. ಈ ಅವಧಿಯಲ್ಲಿ ನಮ್ಮ ಮಂತ್ರಿಮಂಡಲಗಳು ಉದಯವಾದವು ಅವರ ವಿರುದ್ಧ ಪಿತೂರಿಗಳೂ ನಡೆದವು. ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಸಂಯುಕ್ತರಂಗದ ಪತನ ಮತ್ತು ಪುನರ್ ರಚನೆಗಳು ಆದವು. ಪ. ಬಂಗಾಳದಲ್ಲಿ ಅರೆಫ್ಯಾಸಿಸ್ಟ್ ಆಡಳಿತ ನಡೆಯಿತು. ಕೇರಳದಲ್ಲಿ, ತೀವ್ರವಾದ ದಮನ ನಡೆಯಿತು. ಜಯಪ್ರಕಾಶ್ ನಾರಾಯಣರ ನೇತೃತ್ವದ ಚಳುವಳಿ, ಆರಂಭವಾಯಿತು. ಕೊನೆಗೆ ತುರ್ತುಪರಿಸ್ಥಿತಿಯ ಹೇರಿಕೆಯಾಗಿ, ಒಂದು ಪಕ್ಷದ ಸರ್ವಾಧಿಕಾರ ಬಂದಿತು. ನಂತರ ಕಳೆದ ಚುನಾವಣೆಯಲ್ಲಿ ಎಲ್ಲ ವಿರೋಧಪಕ್ಷಗಳೂ ಇದನ್ನು ಒಟ್ಟಾಗಿ ವಿರೋಧಿಸಿದವು.

6. ನಮ್ಮ ಸಬಲ ವಲಯಗಳ ಮೇಲೆ ನಿರಂತರವಾಗಿ [illegible] ಹರಿಸಬೇಕಾಯಿತು. ಮಧುರೈ ಅಧಿವೇಶನದಲ್ಲಿ ನಾವು, ಏಕ ಪಕ್ಷದ ಸರ್ವಾಧಿಕಾರ ಬರುತ್ತಿದೆಯೆಂದು ದೇಶಕ್ಕೆ ಎಚ್ಚರಿಕೆ ಕೊಟ್ಟಿದ್ದೆವು. ಆಳುವ ಕಾಂಗ್ರೆಸ್ಸಿನ ಈ ತರದ ಪ್ರಯತ್ನಕ್ಕೆ ವಿರುದ್ಧವಾಗಿ ಮತ್ತು ಆಳುವ ಪಕ್ಷದ ಪಿತೂರಿಗಳ ವಿರುದ್ಧವಾಗಿ ನಾವು ಹೋರಾಡಬೇಕಾಯಿತು. ಪಕ್ಷವನ್ನು ಕಟ್ಟುವ ಮತ್ತು ವಿಸ್ತರಿಸುವ ಕೆಲಸಗಳ ಕಡೆ ಪಕ್ಷದ ಕೇಂದ್ರವು ಹರಿಸಬಹುದಾದ ಗಮನವನ್ನು ಕಸಿದುಕೊಂಡವು.

7. 1967ರಲ್ಲಿ ಕ್ಯಾಲಿಕಟ್‌ನಲ್ಲಿ ಅಂಗೀಕರಿಸಿದ್ದ ಗೊತ್ತುವಳಿಯು ಸಂಘಟನೆಯ ಬಗ್ಗೆ ಪಕ್ಷಕ್ಕೆ ಸರಿಯಾದ ಮಾರ್ಗವನ್ನು ಸೂಚಿಸಿತು. ಬಲ-ಸುಧಾರಣವಾದ ಮತ್ತು ಪರಿಷ್ಕರಣವಾದಗಳು ಪಕ್ಷದ ಸಂಘಟನೆಯ ಮೇಲೆ ಯಾವ ವಿನಾಶಕಾರಿ ಪರಿಣಾಮಗಳನ್ನು ಬೀರುತ್ತದೆಯೆಂಬುದನ್ನು ಎತ್ತಿ ಹೇಳಲಾಯಿತು. ಪರಿಷ್ಕರಣವಾದಿ ಪರಂಪರೆಯನ್ನು ಪೂರ್ಣವಾಗಿ ಕೈಬಿಡುವುದರ ಅಗತ್ಯ ಮತ್ತು ತುರ್ತನ್ನು ಅದರಲ್ಲಿ ಒತ್ತಿ ಹೇಳಲಾಗಿತ್ತು. ಪರಿಷ್ಕರಣವಾದಿ ನಾಯಕತ್ವದಲ್ಲಿರುವ ಸಾಮ್ರಾಜ್ಯಶಾಹಿ ಧೋರಣೆಗಳ ಬಗ್ಗೆ ಆ ಗೊತ್ತುವಳಿಯು ತೀವ್ರವಾದ ಎಚ್ಚರಿಕೆಯನ್ನು ಕೊಟ್ಟಿತ್ತು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಂಘಟನಾತ್ಮಕ ನಿಯಮಗಳನ್ನು ಭದ್ರವಾಗಿ ಸ್ಥಾಪಿಸಲು, ಪಕ್ಷದ ವರ್ಗಸ್ವರೂಪವನ್ನು ಕಾಪಾಡಲು ಮತ್ತು ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿಯನ್ನು ಒತ್ತಿ ಹೇಳಲು ಅದು ಪ್ರಯತ್ನಿಸಿತು.

8. ಆದರೆ, ಆ ಗೊತ್ತುವಳಿಯಲ್ಲಿ ಕೆಲವು ದೌರ್ಬಲ್ಯಗಳು ಮತ್ತು ಅನಿವಾರ್ಯ ಕೊರತೆಗಳು ಇದ್ದವು. ಪಕ್ಷದ ಬಲಿಷ್ಟವಾದ ಕೇಂದ್ರವನ್ನು ಕಟ್ಟುವ ಮತ್ತು ಅಸಮಾನ ಬೆಳವಣಿಗೆಯಿಂದ ಉಂಟಾಗುವ ದೌರ್ಬಲ್ಯಗಳನ್ನು ತೊಡೆದುಹಾಕಲು ಪಕ್ಷವನ್ನು ಒಟ್ಟುಗೂಡಿಸಿ ವಿಸ್ತರಿಸುವ ಕೆಲಸದಲ್ಲಿ ಈ ಕೇಂದ್ರವು ವಹಿಸುವ ಪಾತ್ರದ, ಬಗೆಗಿನ ಅಂಶಗಳು ಆ ದಾಖಲೆಯಲ್ಲಿ ಇರಲಿಲ್ಲ. ಎರಡನೆಯದಾಗಿ, ಭಾರತದಂಥ ದೊಡ್ಡ ದೇಶಕ್ಕೆ ಹೋಲಿಸಿದರೆ ನಮ್ಮದು ತೀರ ಸಣ್ಣ ಪಕ್ಷ ಎನ್ನುವ ಅಂಶವನ್ನು ಅದು ಒತ್ತಿ ಹೇಳಿರಲಿಲ್ಲ. ಅಲ್ಲದೆ, ವಿಶಾಲವಾದ ಜನತಾತಳಹದಿಯನ್ನುಳ್ಳ ಒಂದು ರಾಷ್ಟ್ರವ್ಯಾಪಿ ಪಕ್ಷವಾಗಿ ಬೆಳೆಸಬೇಕಾದರೆ ನಮ್ಮ ಪಕ್ಷವನ್ನು ಶೀಘ್ರವಾಗಿ ವಿಸ್ತರಿಸಬೇಕು ಎಂಬ ಅಂಶವನ್ನು ಅದು ಹೇಳಿರಲಿಲ್ಲ. ಹಿಂದಿಯನ್ನು ಮಾತನಾಡುವ ಪ್ರದೇಶಗಳಲ್ಲಿ ನಮ್ಮ ಪಕ್ಷ ದುರ್ಬಲವಾಗಿ[illegible]ಯಲ್ಲದೆ, ಅದಕ್ಕೆ ಬೇರೆ ದಾರಿಯನ್ನು ಸೂಚಿಸಿಲ್ಲ. ಕೊನೆಗೆ ದಟ್ಟವಾದ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಚಳುವಳಿಗೆ ಸಹಾಯ ಮಾಡಲು ನಮಗಿರುವ ಸೀಮಿತ ಸಂಪನ್ಮೂಲಗಳು ಮತ್ತು ಸದಸ್ಯವರ್ಗವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಮತ್ತು ಜನತೆಯ ಹೋರಾಟಗಳಿಗೆ ಹೇಗೆ ನಾಯಕತ್ವ ವಹಿಸಬೇಕು ಎಂಬುದರ ಬಗ್ಗೆ ಸರಿಯಾದ ಕಲ್ಪನೆಯನ್ನು ಗೊತ್ತುವಳಿ ಕೊಟ್ಟಿಲ್ಲ. ಪಕ್ಷದ ಸಂಘಟನೆಯ ಬಗ್ಗೆ ನೀಡಲಾದ ಹೊಸ ಆಲೋಚನೆಗೆ ಒತ್ತುಕೊಡುವಾಗ ಈ ಅಂಶ ಮಸುಕಾಗಿ ಹೋಗಿದೆ.

9. ಕೇಂದ್ರ ಮತ್ತು ರಾಜ್ಯಸಮಿತಿಗಳು, ಸೈದ್ಧಾಂತಿಕ ಮತ್ತು ರಾಜಕೀಯ ಐಕ್ಯತೆಗಾಗಿ ಹೋರಾಟ ನಡೆಸುವುದರಲ್ಲಿ ನಿರತರಾಗಿದ್ದರಿಂದ, ಕ್ಯಾಲಿಕಟ್ ಗೊತ್ತುವಳಿಯು ನೀಡಿದ್ದ ಅನೇಕ ಸರಿಯಾದ ಸೂಚನೆಗಳು ಅನಿವಾರ್ಯ ಉಪೇಕ್ಷೆಗೆ ಈಡಾದವು. ಅನೇಕ ಸೂಚನೆಗಳು ಕಾರ್ಯಗತವಾಗದೆ ಹಾಗೇ ಉಳಿದವು. ಇದರಿಂದ, ಪಕ್ಷದ ಮೂಲಭೂತ ಸಂಘಟನಾತ್ಮಕ ನೀತಿಯ ಅಂಗವಾದ ಅವುಗಳನ್ನು ಕ್ರಮಬದ್ಧವಾಗಿ ಪರಿಶೀಲಿಸುವುದರಲ್ಲಿ ಸೋಲು ಉಂಟಾಗಿದೆಯೆಂದು ಹೇಳಬಹುದು.

10. ಆಕ್ರಮಣಕ್ಕೆ ಒಳಗಾಗಿರುವ ಮುಂದುವರೆದ ರಾಜ್ಯಗಳನ್ನು ರಕ್ಷಿಸಲು ಗಮನವನ್ನು ಕೇಂದ್ರೀಕರಿಸುವುದು ಮತ್ತು ದುರ್ಬಲ ಪ್ರದೇಶಗಳನ್ನು ಕಡೆಗಣಿಸಿರುವುದು-ಇವುಗಳಿಂದ ಮುಂದುವರೆದ ರಾಜ್ಯಗಳು ಮತ್ತು ಇತರ ಪ್ರದೇಶಗಳ ನಡುವೆ ಅಂತರ ತುಂಬ ಹೆಚ್ಚಾಯಿತು.

11. ಕೊನೆಯದಾಗಿ, ಗೊತ್ತುವಳಿಯ ದೌರ್ಬಲ್ಯಗಳಿಂದ, ಒಂದು ಬಲವಾದ ಕೇಂದ್ರವನ್ನು ಕಟ್ಟುವ ಸಾಂದ್ರ ಪ್ರಯತ್ನಗಳೂ ಕೂಡ ದುರ್ಬಲವಾದವು. ಇದರ ಫಲವಾಗಿ ಸ್ವತಂತ್ರ ಪ್ರವೃತ್ತಿಗಳನ್ನು ಹೊಡೆದೋಡಿಸಲು ಸಾಧ್ಯವಾಗಲಿಲ್ಲ. ಅವು ಇನ್ನೂ ಹೆಚ್ಚು ಬಲಿಷ್ಟವಾಗಿ ಮುಂದುವರೆದವು.

12. 1969ರ ಮಾರ್ಚ್‌ನಲ್ಲಿ, ಪಕ್ಷದ ಸಂಘಟನೆಯ ವಿಚಾರವನ್ನು, ಪಾಲಿಟ್ ಬ್ಯೂರೋ ಮತ್ತೆ ಚರ್ಚೆಗೆ ಒಳಪಡಿಸಿತು. ನಾಲ್ಕು ವರ್ಷಗಳ ಅವಧಿಯ ಚರ್ಚೆಯ ನಂತರ, ಕೇಂದ್ರ ಸಮಿತಿಯು 1973ರ ಗೊತ್ತುವಳಿಯಲ್ಲಿ "ಸದ್ಯದ ಸಂಘಟನಾತ್ಮಕ ಗುರಿಗಳು" ಎಂಬುದನ್ನು ಅಂಗೀಕರಿಸಿತು. 1967ರ ಗೊತ್ತುವಳಿಯಲ್ಲಿದ್ದ ಸಂಘಟನೆಯ ಗುರಿಗಳನ್ನು ಸರಿಯಾಗಿ ಪರಿಶೀಲಿಸದೆಯೇ 1973ರ ಗೊತ್ತುವಳಿಯನ್ನು [illegible] ಇಲ್ಲ ಗಮನಿಸಬೇಕು. 1973ರ ಗೊತ್ತುವಳಿಯಲ್ಲಿ ನೆರೆಹೊರೆಯ ಪ್ರದೇಶ ಮತ್ತು ವಲಯಗಳ ವಿಚಾರವನ್ನು ಮತ್ತಷ್ಟು ವಿಸ್ತರಿಸಿ, ದೃಢಪಡಿಸಲಾಯಿತು. 1951ರ ಕಾರ್ಯತಂತ್ರ ನೀತಿಯಿಂದ ನೇರವಾಗಿ ಪ್ರಸ್ತುತದ ಸಂಘಟನಾತ್ಮಕ ಗುರಿಗಳನ್ನು ರೂಪಿಸಲಾಗಿತ್ತು.

13. ರಾಷ್ಟ್ರವ್ಯಾಪಿಯಾದ ಒಂದು ವಿಶಾಲ ತಳಹದಿಯ ನಿರ್ಮಾಣಕ್ಕೆ ಕಾರ್ಯತಂತ್ರ ನೀತಿಯ ದಾಖಲೆಯು ಮಾರ್ಗದರ್ಶನ ನೀಡುತ್ತದೆ. ಅಖಿಲ ಭಾರತ ವ್ಯಾಪ್ತಿಯಲ್ಲಿ ಕಾರ್ಮಿಕ ವರ್ಗದ ಸಂಘಟನೆ ಮಾಡುವುದಕ್ಕೆ ಮತ್ತು ಕಾರ್ಮಿಕ ವರ್ಗದ ಅಧಿಪತ್ಯವನ್ನು ಬೆಳೆಸಲು ಅನಿವಾರ್ಯವಾದ ಸಂಗತಿಯಾಗಿರುವ ಪ್ರಮುಖ ಕಾರ್ಖಾನೆಗಳ ಕಾರ್ಮಿಕ ಬಹುಮತ ಪಡೆಯುವುದಕ್ಕೆ, ರೈತವರ್ಗವನ್ನು ರಕ್ಷಿಸಲು ಕಾರ್ಮಿಕರು ಮುಂದಾಗುವುದಕ್ಕೆ ಅನೇಕ ಸೂಚನೆಗಳನ್ನು ನೀಡುತ್ತದೆ. ಜನತೆಯ ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟುವುದಕ್ಕೆ ಮತ್ತು ಒಂದು ಜನಸಾಮೂಹಿಕ ಕಮ್ಯುನಿಸ್ಟ್ ಪಕ್ಷವನ್ನು ಬೆಳೆಸುವುದಕ್ಕೆ ಕಾರ್ಮಿಕರು ಮತ್ತು ರೈತರು ಒಂದಾಗಬೇಕೆಂದೂ ಅದು ಕರೆ ನೀಡುತ್ತದೆ. ಅರೆ ಫ್ಯಾಸಿಸ್ಟ್ ಭೀಕರತೆ ಇರುವಾಗ, ಅಖಿಲ ಭಾರತ ಬೆಂಬಲ ಇಲ್ಲದಿದ್ದರೆ ಚಳುವಳಿಗಳನ್ನು ರಕ್ಷಿಸಿ ವಿಸ್ತರಿಸುವುದು ಅಸಾಧ್ಯ ಎಂಬುದನ್ನು ಅನುಭವ ತೋರಿಸಿಕೊಟ್ಟಿದೆ. ಆದ್ದರಿಂದ ಪಕ್ಷವು ವಿಸ್ತೃತವಾಗಿ ರಾಜಕೀಯ ಪ್ರಚಾರವನ್ನು ನಡೆಸಬೇಕು ಮತ್ತು ಕೆಲವು ಆಯ್ದ ಪ್ರದೇಶಗಳು ಮತ್ತು ಸಬಲ ರಾಜ್ಯಗಳಿಗೇ ಅಂಟಿಕೊಳ್ಳುವುದನ್ನು ಬಿಟ್ಟು ಇಡೀ ದೇಶದಲ್ಲೇ ಚಳುವಳಿಯ ಬೆಳವಣಿಗೆಯನ್ನು ಮಾಡಬೇಕು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

14. 1973ರ ಗೊತ್ತುವಳಿಯಲ್ಲಿ ಇದ್ದ ನಿಕಟ ಸಂಪರ್ಕದ ಪ್ರದೇಶಗಳು, ರಾಜಕೀಯ ತಳಹದಿಯ ಪ್ರದೇಶಗಳು ಇತ್ಯಾದಿಯ ಕಲ್ಪನೆಯನ್ನು ಕಾರ್ಯತಂತ್ರ ನೀತಿಯ ತಕ್ಷಣದ ಮತ್ತು ನೇರ ಕಾರ್ಯಾಚರಣೆಯ ಆಧಾರದ ಮೇಲೆ ಮಾಡಲಾಗಿತ್ತು. ಇದು, ಇಡೀ ದೇಶವನ್ನು ಆವರಿಸಿದ್ದ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಪಕ್ಷವು ಭಾಗವಹಿಸುವುದನ್ನು ತಡೆಯಿತು. ಅಲ್ಲದೆ ಕಾರ್ಯತಂತ್ರ ನೀತಿಯ ವರ್ಗ ತಂತ್ರದ ತಿಳುವಳಿಕೆ ಇದು ಧಕ್ಕೆಯನ್ನೂ ತಂದಿತು.

15. ಗೊತ್ತುವಳಿಯಲ್ಲಿ ಇದ್ದ ತಪ್ಪುಗಳನ್ನು ತಿದ್ದುಕೊಳ್ಳಲು ಕೇಂದ್ರ ಸಮಿತಿಯು ದೀರ್ಘಾವಧಿಯನ್ನು ತೆಗೆದು[illegible] ಅನೇಕ ತಿಂಗಳ ಕಾಲ ಕೇಂದ್ರಸಮಿತಿಯು ಚರ್ಚೆಗಳಲ್ಲೇ ಮುಳುಗಿತ್ತು. ಇದರಲ್ಲೇ ತುರ್ತುಪರಿಸ್ಥಿತಿಯ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ಮುಗಿದುಹೋಯಿತು.

16. ವಿವಾದಕ್ಕೆ ಒಳಗಾಗಿರುವ ಅಂಶವು ಇಡೀ ರಾಜಕೀಯ ಪರಿಸ್ಥಿತಿಯ ತಿಳುವಳಿಕೆಗೆ, ಕಾರ್ಯತಂತ್ರ ನೀತಿಯ ತಿಳುವಳಿಕೆಗೆ, ವರ್ಗ ಮತ್ತು ಜನತೆಯ ಸಂಘಟನೆಗಳ ಮೇಲೆ ಅದಕ್ಕಿರುವ ಪ್ರಭಾವದ ತಿಳುವಳಿಕೆಗಳಿಗೆ ಸಂಬಂಧಿ

[5ನೇ ಪುಟ ನೋಡಿ]

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್. ಎಫ್. ಐ.) ಅಖಿಲ ಭಾರತ ಸಮ್ಮೇಳನ–ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಐಕ್ಯ ಹೋರಾಟಕ್ಕೆ ಕರೆ

ಬಿಹಾರ್ ರಾಜ್ಯದ ಐತಿಹಾಸಿಕ ರಾಜಧಾನಿ ಪಾಟ್ನ ನಗರದಲ್ಲಿ, ಭಾರತದ ವಿದ್ಯಾರ್ಥಿ ಚಳುವಳಿಯಲ್ಲಿ ಚರಿತ್ರಾರ್ಹ ದಾಖಲೆಯಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ನ ಮೂರನೇ ಅಖಿಲ ಭಾರತ ಸಮ್ಮೇಳನ 1979ರ ಫೆಬ್ರವರಿ 19 ರಿಂದ 22ರವರೆಗೆ ಜರುಗಿತು. ದೇಶದ 19 ರಾಜ್ಯಗಳಿಂದ 1283 ಪ್ರತಿನಿಧಿಗಳು ಸದಸ್ಯತ್ವದ ಆಧಾರದ ಮೇಲೆ ಆಯ್ಕೆಗೊಂಡು ಬಂದಿದ್ದರು. 19 ರಂದು ಸಂಜೆ 4 ಗಂಟೆಗೆ ಹುತಾತ್ಮರಾದ "ಕಾಂ॥ ರಂಜನಗೋಸ್ವಾಮಿ ನಗರ"ದಲ್ಲಿ ಸೇರಿದ್ದ ಪ್ರತಿನಿಧಿಗಳು ಹಾಗೂ ಅಸಂಖ್ಯಾತ ಜನತೆಯ ಘೋಷಣೆಗಳ ಮಧ್ಯೆ ಎಸ್.ಎಫ್.ಐ.ನ ಪ್ರಧಾನ ಕಾರ್ಯದರ್ಶಿ ಕಾಂ॥ ಸುಭಾಷ್ ಚಕ್ರವರ್ತಿಯವರು ಕೆಂಪು ನಕ್ಷತ್ರವುಳ್ಳ ಎಸ್.ಎಫ್.ಐ. ಧ್ವಜವನ್ನು ಆರೋಹಣ ಮಾಡಿದರು. ಸಂಘಟನೆಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿ ಹುತಾತ್ಮರಾದ ಕಾಂ॥ ರಂಜನಗೋಸ್ವಾಮಿ, ಕಾಂ॥ ಸೈಯದ್ ಅಲಿ, ಕಾಂ॥ ಮೊಹಮದ್ ಮುಸ್ತಫಾ, ಕಾಂ॥ ಭುವನೇಶ್ವರನ್, ಕಾಂ॥ ಸಮೀರಾನ್ ಭಟ್ಟಾಚಾರ್ಯ ಮತ್ತು ಕಾಂ॥ ಚರನ್ ಜೀತ್‌ಕಾರ್ ಮುಂತಾದವರಿಗೆ ಮೌನ ವಾಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾಂ॥ ಪ್ರಕಾಶ್ ಕಾರತ್‌ರವರು ಎಸ್.ಎಫ್.ಐ. ಪರವಾಗಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ಗುಚ್ಛವನ್ನು ಸಂಘಟನೆಯ ಪರವಾಗಿ ಇರಿಸಿದರು.

ಸಮ್ಮೇಳನ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಡಲು 5ಮಂದಿಯ ಪ್ರಿಸೀಡಿಯಂ ರಚಿಸಲಾಯಿತು. ನಂತರ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್. ಎಫ್. ಐ. ನ ಮಾಜಿ ಪ್ರಧಾನ ಕಾರ್ಯದರ್ಶಿ ಕಾಂ॥ ಬಿಮನ್ ಬಸುರವರು ಅಂತರರಾಷ್ಟ್ರೀಯವಾಗಿ, ರಾಷ್ಟ್ರೀಯವಾಗಿ ಬೆಳೆಯುತ್ತಿರುವ ಸಮಾಜವಾದಿ ಚಳುವಳಿಯನ್ನು ಪ್ರಸ್ತಾಪಿಸಿ, ಈಗಾಗಲೇ ರಾಷ್ಟ್ರೀಯವಾಗಿ ನಾವು ಪಡೆದಿರುವ ವಿಜಯಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಜವಾಬ್ದಾರಿ ಯುವಜನತೆಯ ಮೇಲಿದೆ ಆದ್ದರಿಂದ ಎಸ್.ಎಫ್.ಐ. ಇದರಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಕರೆಯಿತ್ತರು.

ಕ್ಯೂಬಾ, ವಿಯಟ್ನಾಂ ಮುಂತಾದ ಸಮಾಜವಾದೀ ದೇಶಗಳ ವಿದ್ಯಾರ್ಥಿ ಸಂಘಟನೆಗಳು, ಹಾಗೂ ಕಾಂ॥ ಇ. ಎಂ. ಎಸ್. ನಂಬೂದಿರಿಪಾಡ್, ಬುದ್ಧದೇವ ಭಟ್ಟಾಚಾರ್ಯ (ಪ. ಬಂಗಾಳದ ವಾರ್ತಾ ಮಂತ್ರಿ) ಹಾಗೂ ಕಾಂ॥ ಸಮರ ಮುಖರ್ಜಿ ಅಲ್ಲದೆ ವಿವಿಧ ಸಂಘಟನೆಗಳಿಂದ ಸಮ್ಮೇಳನಕ್ಕೆ ಶುಭಾಷಯ ಕೋರಿ ಬಂದಿದ್ದ ಸಂದೇಶಗಳನ್ನು ಕಾಂ॥ ಪ್ರಕಾಶ್ ಕಾರತ್ ಓದಿದರು. ಪ್ರತಿನಿಧಿಗಳು ಹರ್ಷೋದ್ಗಾರಗಳ ಮೂಲಕ ಸಂದೇಶಗಳನ್ನು ಸ್ವೀಕರಿಸಿದರು. ರಾತ್ರಿ 7 ಗಂಟೆಗೆ ಸೇರಿದ ಸಭೆಯಲ್ಲಿ ಪ್ರ. ಕಾರ್ಯದರ್ಶಿ ಕಾಂ॥ ಸುಭಾಷ್ ಚಕ್ರವರ್ತಿಯವರು, ಎರಡನೇ ಸಮ್ಮೇಳನದಿಂದ ಮೂರನೇ ಸಮ್ಮೇಳನದವರೆಗೆ ಅಂತರರಾಷ್ಟ್ರೀಯವಾಗಿ, ರಾಷ್ಟ್ರೀಯವಾಗಿ ನಡೆದ ರಾಜಕೀಯ ಬದಲಾವಣೆಗಳು, ವಿದ್ಯಾರ್ಥಿ ಚಳುವಳಿ, ಎಸ್.ಎಫ್.ಐ. ನಡೆಸಿದ ಹೋರಾಟಗಳು ವಿವರಿಸಿದ್ದಲ್ಲದೆ, ಎಸ್.ಎಫ್.ಐ.ನ ಸರಿಯಾದ ರಾಜಕೀಯ–ಸೈದ್ಧಾಂತಿಕ ಧೋರಣೆಗಳಿಂ

[6ನೇ ಪುಟ ನೋಡಿ]

[4ನೇ ಪುಟದಿಂದ]

ಸಿರುವುದೇ ಹೊರತು, ಕೆಲವು ಸಂಘಟನಾತ್ಮಕ ಕ್ರಮಗಳು ಮತ್ತು ಸಲಹೆಗಳು ವಿವಾದಕ್ಕೆ ಒಳಗಾಗಿಲ್ಲ ಎಂಬುದು ಕೇಂದ್ರಸಮಿತಿಯ ಚರ್ಚೆಗಳಿಂದ ಸ್ಪಷ್ಟವಾಯಿತು.

17. ಗೊತ್ತುವಳಿಯಲ್ಲಿರುವ ತಪ್ಪು ತಿಳುವಳಿಕೆಯನ್ನು ನಿವಾರಿಸಿಕೊಳ್ಳದೆ ಪಕ್ಷವು ತುರ್ತುಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಕಾರ್ಯತಂತ್ರದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳಲಾಗುತ್ತಿರಲಿಲ್ಲ. ಹಾಗೆಯೇ ಚುನಾವಣೆಗಳಲ್ಲಿ ಅನುಸರಿಸಿದ ನಯೋಪಾಯದ ಕಾರ್ಯತಂತ್ರವು ಸಾಧಿತವಾಗುತ್ತಿರಲಿಲ್ಲ.

18. ಕೇಂದ್ರಸಮಿತಿಯ 1976ರ ಗೊತ್ತುವಳಿಯು ಪಕ್ಷವು ಹೊಸ ಹೊಂದಾಣಿಕೆಗಳನ್ನು ಬೆಳೆಸಿಕೊಂಡು ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಭಾಗವಹಿಸುವ ಹಾಗೆ ದಾರಿಯನ್ನು ಸುಗಮಗೊಳಿಸಿತು. ಅಲ್ಲದೆ ಭಾರತದಾದ್ಯಂತ ಪಕ್ಷದ ರಾಜಕೀಯ ಪ್ರತಿಷ್ಠೆ ಹೆಚ್ಚುವ ಹಾಗೆ ಮಾಡಿತು. ಹೆಚ್ಚು ಕಡಿಮೆ ಎಲ್ಲ ರಾಜ್ಯಗಳಲ್ಲಿ ಹೆಚ್ಚಾಗುತ್ತಿರುವ ಜನತೆಯ ಬಲದಿಂದ ಮತ್ತು ಹೆಚ್ಚಾಗುತ್ತಿರುವ ಪಕ್ಷದ ಗೌರವದಿಂದ, ಪಕ್ಷಕ್ಕೆ ಮುಂದುವರೆಯಲು, ಅದರ ಸದ್ಯದ ಗುರಿಯಾದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಸಾಧಿಸಲು, ಹೊಸ ಹೊಸ ಅವಕಾಶಗಳು [illegible] ಪಕ್ಷದ ಸಂಘಟನಾತ್ಮಕ ಪ್ರಯತ್ನಗಳು, [illegible] ಅದರ ರಾಜಕೀಯ ಜವಾಬ್ದಾರಿಗಳು ಮತ್ತು ಅವಕಾಶಗಳಿಗೆ ಸರಿಸಮನಾಗಿ ಹೊಂದಿಕೆಯಾಗುವಂತಿರಬೇಕು.

19. ಸದ್ಯದ ಅವಧಿಯ ದೌರ್ಬಲ್ಯಗಳನ್ನು ಶೀಘ್ರವಾಗಿ ನಿವಾರಿಸಿಕೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ. ಪ್ರಭಾವಶಾಲಿಯಾದ ಕೇಂದ್ರದ ಬದಲು ಈ ಹಿಂದಿನ ವರ್ಷಗಳಲ್ಲಿ ದುರ್ಬಲವಾಗುತ್ತಿರುವ ಕೇಂದ್ರವು ಅಸ್ತಿತ್ವದಲ್ಲಿತ್ತು. ಪಾಲಿಟ್‌ಬ್ಯೂರೋನ ಬಹುಸಂಖ್ಯೆಯ ಸದಸ್ಯರು ಕೇಂದ್ರದಲ್ಲಿ ಕೆಲಸಮಾಡಲಾಗುತ್ತಿರಲಿಲ್ಲ. ಏಕೆಂದರೆ ಅವರಿಗೆ ಎಂದಿನಂತೆ ದ್ವಿವಿಧವಾದ ಜವಾಬ್ದಾರಿಗಳು ಇದ್ದವು. ಪಕ್ಷದ ಕೇಂದ್ರದ ಕೆಲಸಕಾರ್ಯಗಳು ತುಂಬ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿದ್ದವು. ಅತಿ ಅಗತ್ಯವಾಗಿದ್ದ ಮತ್ತು ತುಂಬ ತುರ್ತಾದ ರಾಜಕೀಯ-ಸಂಘಟನಾತ್ಮಕ ಕೆಲಸಗಳನ್ನು ಮಾತ್ರ ಕೇಂದ್ರವು ನಿರ್ವಹಿಸುತ್ತಿತ್ತು. ಇದರ ಫಲವಾಗಿ, ಪಾಲಿಟ್‌ಬ್ಯೂರೋ ಸದಸ್ಯರು ಸಾಮೂಹಿಕ ಕಾರ್ಯಾಚರಣೆ ಮತ್ತು ಸಾಮೂಹಿಕವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟು ವೈಯಕ್ತಿಕವಾಗಿ ಕಾರ್ಯ ನಿರ್ವಹಿಸುವಂತೆ ಆಯಿತು.

20. ಇದರಿಂದ ರಾಜ್ಯಗಳು ತಮ್ಮ ಚಟುವಟಿಕೆಗಳ ಬಗ್ಗೆ ಕೇಂದ್ರಕ್ಕೆ ವರದಿ ಸಲ್ಲಿಸದೆ ಸ್ವತಂತ್ರವಾಗಿ ವರ್ತಿಸಲು ಅನುಕೂಲವಾಯಿತು. ಪಕ್ಷದ ಚಟುವಟಿಕೆಗಳ ಬಗ್ಗೆ ನಿಯತಕಾಲದಲ್ಲಿ ವರದಿಗಳನ್ನು ಕೇಂದ್ರಕ್ಕೆ ಕಳಿಸದಿದ್ದರೆ, ಪಕ್ಷದ ಪತ್ರಿಕೆಗಳು, ಪುಸ್ತಕ ಪ್ರಕಟಣೆ, ಸೈದ್ಧಾಂತಿಕ ಶಿಕ್ಷಣ ನೀಡುವಿಕೆ ಮುಂತಾದ ವಿಚಾರಗಳಲ್ಲಿ ರಾಜ್ಯಸಮಿತಿಗಳು ಮತ್ತು ಪಕ್ಷದ ಕೇಂದ್ರದ ನಡುವೆ ಸಹಕಾರ ಮತ್ತು ಉಸ್ತುವಾರಿಗಳು ಇರದಿದ್ದರೆ, ಒಂದು ಕ್ರಾಂತಿಕಾರಿ ಕಾರ್ಮಿಕವರ್ಗದ ಪಕ್ಷಕ್ಕೆ ಅಗತ್ಯವಾದ ರಾಜಕೀಯ-ಸೈದ್ಧಾಂತಿಕ ಐಕ್ಯತೆಯನ್ನು ಸಾಧಿಸಲಾಗುವುದಿಲ್ಲ.

21. ಈ ಪರಿಸ್ಥಿತಿಯನ್ನು 1967 [illegible]ಯು ಈ ಮಾತುಗಳಲ್ಲಿ ವಿವರಿಸ[illegible] ಕೃತವಾಗಿ ವ್ಯವಸ್ಥೆಗೊಂಡಿರುವ [illegible] ಸಬಲವಾಗಿರುವ ಬೂರ್ಜ್ವಾ-ಜಮೀನ್ದಾರ ಮಿಶ್ರಣದ ರಾಜ್ಯ ಆಡಳಿತಯಂತ್ರವನ್ನು, ಕೇಂದ್ರೀಕೃತವಾಗಿ ಚೆನ್ನಾಗಿ ಸಂಘಟಿತವಾಗಿರುವ ಕಮ್ಯುನಿಸ್ಟ್ ಪಕ್ಷವೊಂದು ಎದುರಿಸಿ, ಭಾರತದಲ್ಲಿ ಕ್ರಾಂತಿಯಲ್ಲಿ ತರಬಹುದು ಎಂಬುದನ್ನು ಮಾತುಗಳಲ್ಲಿ ಒಪ್ಪಿಕೊಳ್ಳಲಾಗುತ್ತದೆ. ಆದರೆ ಕಾರ್ಯಾಚರಣೆಯಲ್ಲಿ ಮಾತ್ರ, ಸ್ವತಂತ್ರ ದೃಷ್ಟಿಕೋನಗಳೇ ಹೆಚ್ಚಾಗಿ, ಈ ತಿಳುವಳಿಕೆಯನ್ನು ಮರೆಯಲಾಗುತ್ತದೆ. ರಾಜ್ಯದ ಮಟ್ಟಿಗೆ ಮಾತ್ರ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವುದು ಮತ್ತು ಅಖಿಲ-ಭಾರತ ಪ್ರಜ್ಞೆ ಇಲ್ಲದಿರುವುದು–ಇವು ಪಕ್ಷದ ನಾಯಕತ್ವದಲ್ಲಿ ಸ್ಥಾನವನ್ನು ಪಡೆಯುತ್ತಿವೆ".

22. ಒಂದು ಲೆನಿನ್‌ವಾದಿ ಪಕ್ಷವಾಗಿ ಮಾರ್ಪಡಬೇಕಾದರೆ, ಪಕ್ಷದ ರಾಜಕೀಯ ಮತ್ತು ಸದ್ಯದ ಹೋರಾಟಗಳ ಜೊತೆ, ಸ್ಥಳೀಯವಾದ, ಮಾರ್ಕ್ಸ್‌ವಾದಕ್ಕೆ ವಿರೋಧವಾಗಿರುವ ಮತ್ತು ಮಾರ್ಕ್ಸ್‌ವಾದಕ್ಕೆ ತಕ್ಕುದಾಗಿರದ ಎಲ್ಲ ಸಿದ್ಧಾಂತಗಳ ವಿರುದ್ಧ ನಡೆಸುವ ಸತತ ಸೈದ್ಧಾಂತಿಕ ಹೋರಾಟಗಳನ್ನು ಒಂದುಗೂಡಿಸಬೇಕು. ಈ ಥರದ ಹೋರಾಟವಿಲ್ಲದಿದ್ದರೆ ಮಾರ್ಕ್ಸ್‌ವಾದದ ಶ್ರೇಷ್ಠತೆಯನ್ನು ಎತ್ತಿಹಿಡಿಯಲು ಸಾಧ್ಯವಿಲ್ಲ. ಪಕ್ಷದ ಪ್ರಭಾವ, ಅದು ನೇತೃತ್ವ ವಹಿಸಿರುವ ಜನತಾ ಸಂಘಟನೆಗಳ ಬಲ ಮತ್ತು ಪಕ್ಷಕ್ಕೆ ನಿಜವಾಗಿ ಸೇರಿಸುತ್ತಿರುವ ಸದಸ್ಯರ ಸಂಖ್ಯೆ ಇವುಗಳ ನಡುವೆ ಹೊಂದಾಣಿಕೆ ಇರದಿರುವುದಕ್ಕೆ ಕಂಡುಬರುವ ಅನೇಕ ಕಾರಣಗಳಲ್ಲಿ, ಈ ಬಹುಮುಖ ಹೋರಾಟವನ್ನು ನಡೆಸದಿರುವುದೂ ಒಂದಾಗಿದೆ.

23. ಈ ಹೊಂದಾಣಿಕೆ ಇಲ್ಲದಿದ್ದರೆ, ಆರ್ಥಿಕ ಹೋರಾಟಗಳಿಂದ ಮೂಡಿಬರುವ ಪ್ರಾಥಮಿಕ ಆರ್ಥಿಕ ಪ್ರಜ್ಞೆಯನ್ನು ಸಮಾಜವಾದಿ ಪ್ರಜ್ಞೆಯನ್ನಾಗಿ ಪರಿವರ್ತಿಸುವುದು ಅಸಾಧ್ಯವಾಗುತ್ತದೆ. ಅನೇಕ ಸಂಖ್ಯೆಯಲ್ಲಿ ಮತ್ತು ಒಂದು [illegible] ಹೋಗುವುದು ಸದಸ್ಯವರ್ಗವನ್ನು ಕಟ್ಟುವುದರಲ್ಲಿ [illegible]ರುವ ಸೋಲು—ಇವುಗಳಿಗಿರುವ ಅನೇಕ ಕಾರಣಗಳಲ್ಲಿ ಸೈದ್ಧಾಂತಿಕ ಹೋರಾಟದ ಕೊರತೆಯಿರುವುದೂ ಒಂದು. ಕಾರ್ಮಿಕರು, ರೈತರು ಮುಂತಾದವರು ನ[illegible] ಪ್ರಭಾವದಿಂದ ಜನತೆಯ ರಾಜಕೀಯ ಹೋರಾಟಗಳಲ್ಲಿ ಹೆಚ್ಚಿನ ಪಾತ್ರ ವಹಿಸುವುದು ತುಂಬ ಅಗತ್ಯವಾಗಿದೆ. ಪಕ್ಷದ ಸೈದ್ಧಾಂತಿಕ ಹೋರಾಟದಿಂದ ಅವರ ಆರ್ಥಿಕ ಮತ್ತು ರಾಜಕೀಯ ಚಟುವಟಿಕೆಗಳಿಗೆ ಸಹಾಯ ಪ್ರೋತ್ಸಾಹಗಳು ಸಿಗಬೇಕು.

24. ಪಕ್ಷದ ವಿಸ್ತರಣೆ ಮತ್ತು ಪಕ್ಷದ ಸದಸ್ಯರ ಶಿಕ್ಷಣ ಇವುಗಳು ಪಕ್ಷವನ್ನು ಕಟ್ಟುವ ಕೆಲಸದ ಎರಡು ಭಾಗಗಳು. ಪಕ್ಷದ ಸದಸ್ಯರ ಪ್ರಜ್ಞೆಯನ್ನು ಹೆಚ್ಚಿಸುವುದು ಮತ್ತು ಅವರ ಗುಣಮಟ್ಟವನ್ನು ಹೆಚ್ಚಿಸುವುದು ಇವುಗಳಿಗೆ ತುರ್ತು ಗಮನವನ್ನು ನೀಡಬೇಕಾಗಿದೆ. ಪಕ್ಷದ ಸದಸ್ಯರ ಮತ್ತು ಪಕ್ಷದ ಹೊಸಬರ ತಿಳುವಳಿಕೆ ಮಟ್ಟವನ್ನು ಹೆಚ್ಚಿಸುವ ಪ್ರಯತ್ನಗಳನ್ನು ಮಾಡದಿದ್ದರೆ, ಒಂದು ಜನಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ಪ್ರಯತ್ನ ವಿಫಲವಾಗುತ್ತದೆ.

25. ಈ ಸಂಬಂಧದಲ್ಲಿ, 1964ರ ನಂತರವೇ ಪಕ್ಷಕ್ಕೆ ಬಹುಸಂಖ್ಯೆಯಲ್ಲಿ ಸದಸ್ಯರು ಬಂದಿದ್ದಾರೆಂಬ ಅಂಶವು ತುಂಬಾ ಮುಖ್ಯವಾದದ್ದು.

26. ಈ ಸಾವಿರಾರು ಸದಸ್ಯರು ಅನೇಕ ಹೋರಾಟಗಳನ್ನು ನಡೆಸಿದ್ದಾರೆ, ಪೋಲೀಸ್ ದಬ್ಬಾಳಿಕೆಯನ್ನು ಎದುರಿಸಿದ್ದಾರೆ ಮತ್ತು ಅನೇಕ ಕಷ್ಟಕರವಾದ ಪ್ರಸಂಗಗಳಲ್ಲಿಯೂ ಪಕ್ಷದ ಹೆಗ್ಗಳಿಕೆಯನ್ನು ಎತ್ತಿಹಿಡಿದಿದ್ದಾರೆ. ಹೀಗೆ ತಮ್ಮ ಸದಸ್ಯತ್ವವನ್ನು ಅವರೆಲ್ಲರೂ ಸಾರ್ಥಕಪಡಿಸಿಕೊಂಡಿದ್ದಾರೆ. ಆದರೆ ಪಕ್ಷವು ಅವರಿಗೆ ಅರ್ಹವಾದ ನ್ಯಾಯವನ್ನು ಕೊಡಲು ಸಾಧ್ಯವಾಗಿಲ್ಲ. ಕಳೆದ ವರ್ಷಗಳಲ್ಲಿ ಬಲ ಮತ್ತು ಎಡ ಪಂಥಗಳ ಜೊತೆ ನಡೆಸಿದ ಹೋರಾ[illegible] ಅನುಭವ ಅವರಿಗಿಲ್ಲ. ಆದ್ದ[illegible] ಅದರಲ್ಲೂ [illegible] ಬಗ್ಗೆ ಭೂತ ನೀತಿಗಳ ಶಿಕ್ಷಣದ ಬಗ್ಗೆ [illegible]ರಿಗೆ ಗಮನ ನೀಡಬೇಕಾಗಿದೆ. ಈ ಕೊರತೆಯನ್ನು ನಿವಾರಿಸದಿದ್ದರೆ, ಸೈದ್ಧಾಂತಿಕ ಗೊಂದಲ ಮತ್ತು ಹಗುರತೆಗಳು ತಲೆದೋರುವ ಸಂಭವವಿದೆ.

27. ಪಕ್ಷದ ಪೂರ್ಣಾವಧಿ ಕೆಲಸಗಾರರು ಮತ್ತು ಸದಸ್ಯರು ತ್ಯಾಗಕ್ಕೆ ಮತ್ತು ಪಕ್ಷದ ಬಗ್ಗೆ ಇಟ್ಟಿರುವ ವಿಶ್ವಾಸಕ್ಕೆ ತುಂಬ ಹೆಸರಾದ ಉದಾಹರಣೆಗಳಾಗಿದ್ದಾರೆ. ಆದರೆ ಅವರು ಪಕ್ಷದ ವೇತನ ಎಂದು ಕರೆಸಿಕೊಳ್ಳುವ ಶೋಚನೀಯವಾದ ಸಂಭಾವನೆಯಲ್ಲಿ ಜೀವನ ನಡೆಸಬೇಕಾಗಿದೆ. ಅನೇಕ ರಾಜ್ಯಗಳಲ್ಲಿ ಪಕ್ಷ ಕೊಡುವ ವೇತನವು ತೀರ ಕಡಿಮೆಯಿದೆ. ಒಂದು ಕಾರ್ಖಾನೆಯಲ್ಲಿ ಕುಶಲನಲ್ಲದ ಕೆಲಸಗಾರನಿಗೆ ನೀಡುವ ವೇತನದ ಅರ್ಧದಷ್ಟಿದೆ. ಬೇರೆ ಸಂಪನ್ಮೂಲಗಳು ಇಲ್ಲದಿದ್ದರೆ ಒಬ್ಬ ಪೂರ್ಣಾವಧಿ ಕೆಲಸಗಾರನು ಈ ವೇತನದಿಂದ ಜೀವನ ನಡೆಸುವುದು ತುಂಬಾ ಕಷ್ಟವಿದೆ. ಹೀಗಾದಾಗ, ಕಾರ್ಮಿಕ ವರ್ಗ ಮತ್ತು ಕೃಷಿಕಾರ್ಮಿಕವರ್ಗದ ಹೆಚ್ಚು ಸದಸ್ಯರನ್ನು ಪೂರ್ಣಾವಧಿ ಕೆಲಸಗಾರರನ್ನಾಗಿ ನೇಮಿಸಿಕೊಳ್ಳುವುದು ತಾನಾಗಿಯೇ ಕಡಿಮೆಯಾಗುತ್ತದೆ.

28. ಹೋರಾಟ ನಡೆಸುವ ಯುವ ಸದಸ್ಯರು ಒಂದೇ ರೀತಿಯ ಕೆಲಸಮಾಡಿಕೊಂಡು, ದಿನನಿತ್ಯದ ಕೆಲಸಗಳಲ್ಲಿಯೇ ಮುಳುಗಿಹೋಗುತ್ತಾರೆ. ಈ ಥರದ ಕೆಲಸದಿಂದ ಅವರ ಪ್ರಜ್ಞೆ ಎತ್ತರಕ್ಕೆ ಬೆಳೆಯಲು ಸಾಧ್ಯವಿಲ್ಲವೆಂಬ ಅಂಶ ಅವರಿಗೆ ಗೋಚರವಾಗದಿರುವುದು ಅನುಭವಕ್ಕೆ ಬಂದಿದೆ. ಸರಿಯಾದ ಸೈದ್ಧಾಂತಿಕ ತರಬೇತಿ ಇಲ್ಲದೆ, ವಿಶೇಷ ಗಮನದ ಕೊರತೆ ಇದ್ದಾಗ ಅವರು, ಒಂದೇ ರೀತಿ ಕೆಲಸ ಮಾಡುತ್ತಿರುತ್ತಾರೆ ಅಥವಾ ಸಂಘಟನೆಯ ಯಜಮಾನರಾಗಿಬಿಡುತ್ತಾರೆ. ಹಾಗಾದಾಗ, ಪಕ್ಷದ ನಾಯಕತ್ವದ ಮಟ್ಟಕ್ಕೆ ಏರುವುದರಲ್ಲಿ ವಿಫಲರಾಗುತ್ತಾರೆ. ಯುವಕರಿಗೆ ಸೈದ್ಧಾಂತಿಕ ತರಬೇತಿಗೆ ವಿಶೇಷ ಅವಕಾಶ ಕೊಟ್ಟು ಅವರ ಸ್ವಯಂ ಬೆಳವಣಿಗೆಗೆ ಬೇಕಾದ [illegible]ಕೊಟ್ಟರೆ, ಹೀಗೆ ಸದಸ್ಯರು

★

ಎಸ್. ಎಫ್. ಐ. – ಐಕ್ಯ ಹೋರಾಟಕ್ಕೆ ಕರೆ

(5ನೇ ಪುಟದಿಂದ)

ದಾಗಿ ಈಗ ಎಸ್.ಎಫ್.ಐ. ರಾಷ್ಟ್ರದಲ್ಲಿ ಅತಿ ಬಲಿಷ್ಠ ಹಾಗೂ ಬೃಹತ್ ವಿದ್ಯಾರ್ಥಿ ಸಂಘಟನೆಯಾಗಿದೆ ಎಂದರು.

ತಾ॥ 20-2-79ರಂದು ಇಡೀ ದಿನ ಹಾಗೂ ತಾ॥ 21ರ ಸಂಜೆಯವರೆಗೆ ಕರಡು ವರದಿಯ ಮೇಲೆ ಚರ್ಚೆ ನಡೆಯಿತು. ಚರ್ಚೆಯಲ್ಲಿ ಭಾಗವಹಿಸಿದ ಬಹುಪಾಲು ಪ್ರತಿನಿಧಿಗಳು ಎಸ್.ಎಫ್.ಐ.ನ ಪತ್ರಿಕೆ "ಸ್ಟೂಡೆಂಟ್ಸ್ ಸ್ಟ್ರಗಲ್" ಪುನಹ ಪ್ರಾರಂಭಿಸಬೇಕು. ಕೇಂದ್ರ ಸಮಿತಿ ಹಿಂದುಳಿದಿರುವ ರಾಜ್ಯಗಳಿಗೆ ಹೆಚ್ಚು ಗಮನ ನೀಡಬೇಕೆಂದು ಕೇಳಿಕೊಂಡರು. ಕಾ॥ ಸುಭಾಷ್‌ಚಕ್ರವರ್ತಿ ಮತ್ತು ಕಾ॥ ಪ್ರಕಾಶ್ ಕಾರತ್ ಚರ್ಚೆಯಲ್ಲಿ ಬಂದ ಟೀಕೆಗಳಿಗೆ ಉತ್ತರವಿತ್ತರು, ಕೆಲವು ಸಲಹೆಗಳನ್ನು ಒಪ್ಪಿಕೊಂಡಿರುವುದಾಗಿ ಹೇಳಿ, ಮುಂದೆ ಇವುಗಳನ್ನು ಸರಿಪಡಿಸುವ ಜವಾಬ್ದಾರಿ ಹೊಸ ಕೇಂದ್ರ ಸಮಿತಿ ವಹಿಸಿಕೊಳ್ಳುವುದೆಂದು ನುಡಿದರು. ಚರ್ಚೆಯಲ್ಲಿ ಕರ್ನಾಟಕದ ಇಬ್ಬರು ಪ್ರತಿನಿಧಿಗಳು 15 ನಿಮಿಷಗಳ ಕಾಲ ಮಾತನಾಡಿದರು.

ಅದೇ ದಿನ ಸಂಜೆ 7 ಗಂಟೆಯ ಸಭೆಯಲ್ಲಿ ಸಮ್ಮೇಳನದ ಮುಖ್ಯ ಮನವಿಯನ್ನು ಕಾ॥ ಪ್ರಕಾಶ್ ಕಾರತ್ ಮಂಡಿಸಿದರು, ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹಾಗೂ ಅದರ ವಿಸ್ತರಣೆಗಾಗಿ ವಿದ್ಯಾರ್ಥಿಗಳು ಹೋರಾಡಲು ಕರೆ ನೀಡಿರುವ ಮನವಿ, ವೈಜ್ಞಾನಿಕ ಶಿಕ್ಷಣ ಪದ್ಧತಿ, ವಯಸ್ಕರ ಶಿಕ್ಷಣ, ಉದ್ಯೋಗವನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸುವುದು, ಆರೆಸ್ಸೆಸ್‌ನಂತಹ ಕೋಮುವಾರಿ ಫ್ಯಾಸಿಸ್ಟ್ ಸಂಘಟನೆಗಳ ವಿರುದ್ಧ ಹೋರಾಟ, ಹರಿಜನ-ಗಿರಿಜನರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯ ಖಂಡನೆ ಹಾಗೂ ಸಾಮ್ರಾಜ್ಯವಾದಿಗಳ ಪಿತೂರಿಯನ್ನು ನಾಶಮಾಡಲು ಕರೆ ಕೊಟ್ಟಿರುವುದಲ್ಲದೆ, ದೇಶದಲ್ಲಿ ಎಡ ವಿದ್ಯಾರ್ಥಿಗಳ ವಿಶಾಲ ವೇದಿಕೆಯನ್ನು ರಚಿಸಲು ಕರೆ ಕೊಟ್ಟಿದೆ. ರಾತ್ರಿ 2ಗಂಟೆಯವರೆಗೂ ನಡೆದ ಸಭೆಯಲ್ಲಿ ಕರಡು ವರದಿ, ಮುಖ್ಯ ಮನವಿ ಹಾಗೂ ಅನೇಕ ನಿರ್ಣಯಗಳನ್ನು ಪಾಸು ಮಾಡಲಾಯಿತು. ಮುಖ್ಯವಾಗಿ 1) ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ. 10ರಷ್ಟು ವೆಚ್ಚವನ್ನು ಶಿಕ್ಷಣಕ್ಕಾಗಿ ಮೀಸಲಿಡಬೇಕು. 2) ಪ್ರಜಾಸತ್ತಾತ್ಮಕ ಭಾಷಾ ನೀತಿ, 3) ನಿರುದ್ಯೋಗ ನಿವಾರಣೆ, 4) ವಿದ್ಯಾರ್ಥಿ ಚಳುವಳಿಯ ಮೇಲೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ದಮನಕಾರಿ ನೀತಿ, 5) ಮಹಿಳೆಯರಿಗೆ ವಿದ್ಯಾಭ್ಯಾಸದಲ್ಲಿ ಆಗುತ್ತಿರುವ ಅಸಮಾನತೆ ಹಾಗೂ 6) ವಿವಿಧ ದೇಶಗಳಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೋರಾಟಗಳಿಗೆ ಹಾಗೂ ಸಾಮ್ರಾಜ್ಯವಾದಿ ವಿರೋಧಿ ಹೋರಾಟಗಳಿಗೆ ಬೆಂಬಲ [illegible] ವಿಯಟ್ನಾಂಗೆ ಬೆಂಬಲ ವ್ಯಕ್ತಪಡಿಸಲಾಯಿತು ಹಾಗೂ ಕಾ॥ ಸ್ಟಾಲಿನ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯವನ್ನು ಸರ್ವಾನುಮತದಿಂದ ಪಾಸುಮಾಡಲಾಯಿತು.

ಕೇಂದ್ರ ಸಮಿತಿ ಮತ್ತು ಪದಾಧಿಕಾರಿಗಳ ಚುನಾವಣೆಯಲ್ಲಿ, 59 ಸದಸ್ಯರ ಕೇಂದ್ರ ಸಮಿತಿಯನ್ನು ಚುನಾಯಿಸಲಾಯಿತು. ಕರ್ನಾಟಕದಿಂದ ಇಬ್ಬರು ಪ್ರತಿನಿಧಿಗಳು ಕೇಂದ್ರ ಸಮಿತಿಗೆ ಆಯ್ಕೆಯಾದರು. ಕೇರಳದ ಕಾ॥ ಎಂ. ಎ. ಬೇಬಿಯವರನ್ನು ಅಧ್ಯಕ್ಷರನ್ನಾಗಿಯೂ, ಪ. ಬಂಗಾಳದ ಕಾ॥ ನೇಪಾಲ್‌ದೇವ್ ಭಟ್ಟಾಚಾರ್ಯ ಇವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ ಆರಿಸಲಾಯಿತು. ಇವರಲ್ಲದೆ 5 ಜನ ಉಪಾಧ್ಯಕ್ಷರು, 4 ಜನ ಸಹಕಾರ್ಯದರ್ಶಿಗಳು ಖಜಾಂಚಿ ಮತ್ತು ಕೇಂದ್ರ ಕಛೇರಿ ಕಾರ್ಯದರ್ಶಿಗಳನ್ನು ಸಹಾ ಆಯ್ಕೆ ಮಾಡಲಾಯಿತು.

ತಾ॥ 22ರಂದು ಕೊನೆಯ ದಿನದ ಅಧಿವೇಶನವನ್ನು ಉದ್ದೇಶಿಸಿ, ಪ. ಬಂಗಾಳದ ಮುಖ್ಯಮಂತ್ರಿ ಕಾಂ॥ ಜ್ಯೋತಿಬಸುರವರು ಹಾಗೂ ನೂತನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಮಾತನಾಡಿದರು. ಗಾಂಧಿ ಮೈದಾನದ ಬೃಹತ್ ಜಾಗವನ್ನು ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ಜನಸಾಮಾನ್ಯರು ಸಭೆಗೆ ಅರ್ಧ ದಿನ ಮೊದಲೇ ಶ್ರಮಿಸಿದ್ದರು. ಬಹಿರಂಗ ಸಭೆಗೆ ಮೊದಲು ಎಸ್. ಎಫ್. ಐ. ಪ್ರತಿನಿಧಿಗಳು ಪಾಟ್ನಾದ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗಿದರು; ನಾಲ್ಕು ದಿನವೂ ಸಮ್ಮೇಳನದ ಸ್ಥಳಕ್ಕೆ ಹೋಗುವಾಗ ದಿನಕ್ಕೆರಡು ಬಾರಿಯಂತೆ ನಡೆಯುತ್ತಿದ್ದ ಮೆರವಣಿಗೆ ಮತ್ತು ಘೋಷಣೆಗಳು ಪಾಟ್ನಾ ನಿವಾಸಿಗಳಿಗೆ ಆಕರ್ಷಣೆಯ ವಸ್ತುವಾಗಿದ್ದವು.

ಬೃಹತ್ ಮೆರವಣಿಗೆಯ ನಂತರ ನಡೆದ ಭಾರೀ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ॥ ಜ್ಯೋತಿಬಸುರವರು ಬಿಹಾರದಲ್ಲಿ ಹಿಂದುಳಿದವರು ಮತ್ತು ಮುಂದುವರೆದವರು ಎಂದು ಜನತೆಯ ಮಧ್ಯೆ ಚಳುವಳಿ ಪ್ರಾರಂಭವಾಗಿರುವುದನ್ನು ಪ್ರಸ್ತಾಪಿಸಿ, ಎಡ ಸರಕಾರಗಳು ಇರುವ ರಾಜ್ಯಗಳಲ್ಲಿ ಈ ಸಮಸ್ಯೆ ಇಲ್ಲ. ನಮ್ಮಲ್ಲಿ ರೊಟ್ಟಿ ಕಡಿಮೆ ಇದೆ ಅದನ್ನು ಜಾತಿ ಆಧಾರದಮೇಲೆ. ಹಿಂದುಳಿದಿರುವಿಕೆಯ ಆಧಾರದ ಮೇಲೆ ಹಂಚುತ್ತೇವೆ ಎಂದು ಕೆಲವರು ಹೇಳಲು ತೊಡಗಿರುವುದರಿಂದ ಈ ಸಮಸ್ಯೆ ಬಂದಿದೆ, ಆದರೆ ಯಾರಿಗೆ ಹೇಗೆ ಹಂಚಿದರೂ ಕೆಲವರಾದರೂ ಉಪವಾಸ ಬೀಳಬೇಕಾಗುತ್ತದೆ. ಆದ್ದರಿಂದಲೇ, ಎಡ ಸರ್ಕಾರಗಳು ಹೇಳುತ್ತಿರುವುದು, ನಾವು ಎಲ್ಲರೂ ಸೇರಿ ಹೆಚ್ಚು, ಹೆಚ್ಚು ರೊಟ್ಟಿಗಳನ್ನು ಉತ್ಪಾದಿಸೋಣ ಅವನ್ನು ಅವಶ್ಯಕತೆಗೆ ತಕ್ಕಂತೆ ಹಂಚೋಣ ಎಂದು. ಸಮಾಜವಾದೀ ಆರ್ಥಿಕ ಸೂತ್ರದಿಂದ ಈ ದೇಶದಲ್ಲಿ ಎಲ್ಲರಿಗೂ ರೊಟ್ಟಿ ದೊರೆಯಲು ಸಾಧ್ಯವಿದೆ, ಆದ್ದರಿಂದ ವಿದ್ಯಾರ್ಥಿಗಳು [illegible]

ಕ್ರಾಂತಿಗೆ ಜಯವಾಗಲಿ, ವಿದ್ಯಾರ್ಥಿಗಳ ಹೋರಾಟಕ್ಕೆ ಜಯವಾಗಲಿ, ದುಡಿಯುವ ವರ್ಗಕ್ಕೆ ಜಯವಾಗಲಿ ಎನ್ನುವ ಘೋಷಣೆಗಳೊಂದಿಗೆ ಎಸ್. ಎಫ್.ಐ.ನ ಮೂರನೇ ಅಖಿಲ ಭಾರತ ಸಮ್ಮೇಳನ ಮುಗಿಯಿತು. —

ರೈತರ ಮಧ್ಯೆ ಅಭೂತಪೂರ್ವ ಸ್ವಾಗತ ಪಡೆದ ಜಿಲ್ಲಾ ರೈತಸಂಘದ "ಜೀಪ್ ಜಾಥಾ"

ದಕ್ಷಿಣಕನ್ನಡ ಜಿಲ್ಲೆಯ ರೈತಸಂಘದ ನೇತೃತ್ವದಲ್ಲಿ ಫೆಬ್ರವರಿ ತಿಂಗಳಲ್ಲಿ ತಾ. 11ರಿಂದ ಕುಂದಾಪುರದಿಂದ "ಜೀಪ್ ಜಾಥಾ" ಹೊರಟು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸುತ್ತಾಡಿ ತಾ. 18-7-79ರಂದು ಮಂಗಳೂರಿನ ತೊಕ್ಕೊಟ್ಟು ಮೈದಾನಿನ ಬೃಹತ್ ಸಭೆಯಲ್ಲಿ ಮುಕ್ತಾಯವಾಯಿತು.

ಜೀಪ್ ಜಾಥಾದ ಮುಂದಾಳುತ್ವವನ್ನು ಜಿಲ್ಲಾ ರೈತಸಂಘದ ಮುಂದಾಳುಗಳಾದ ಕಾಂ॥ ಅಬ್ರಹಾಂಕರ್ಕಡ, ಕಾಂ॥ ಜನಾರ್ಧನ ನಾಯಕ್, ಕಾಂ॥ ಡೇವಿಡ್ ಎ. ಕರ್ಕಡರು ವಹಿಸಿದ್ದರು. ದುಡಿಯುವ ರೈತರ, ಕೃಷಿಕೂಲಿಗಾರರ ದರಖಾಸ್ತುದಾರರ ಸಮಸ್ಯೆಗಳಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಜಿಲ್ಲಾ ರೈತಸಂಘದ ನೇತೃತ್ವದಲ್ಲಿ ಹನ್ನೊಂದು ಕೇಳಿಕೆಗಳನ್ನೊಳಗೊಂಡ ಮನವಿಯೊಂದನ್ನು ಕಂದಾಯ ಸಚಿವರಾದ ಶ್ರೀಮಾನ್ ಬಸವಲಿಂಗಪ್ಪನವರಿಗೆ ಈ ಮೊದಲೇ ಕೊಡಲಾಗಿತ್ತು.

ಕೇಳಿಕೆಗಳು, ರೈತರಿಗೆ ಧರ್ಮಾರ್ಥ ಹೊಲ ಕೊಡುವ ಕಾಯಿದೆ ಜಾರಿಯಾಗಬೇಕು. ರೈತರ ಎಲ್ಲಾ ಸಾಲಗಳನ್ನು ರದ್ದುಗೊಳಿಸಿ ಅವರಿಗೆ ನೆರವು ನೀಡುವ ಕ್ರಮ ತರಬೇಕು. ಭೂನ್ಯಾಯ ಮಂಡಳಿಯ ಅನ್ಯಾಯದ ತೀರ್ಪುಗಳಿಂದ ಭೂಮಿ ಕಳಕೊಂಡವರಿಗೆ ನ್ಯಾಯ ಒದಗಿಸಬೇಕು. ಯಾವಕಾರಣದಿಂದಲೂ ದುಡಿಯುವ ರೈತರನ್ನು ಹೊಲದಿಂದ ಹೊರದೂಡಬಾರದು. ಭೂಮಿ ಕಳಕೊಳ್ಳುವ ಚಿಕ್ಕಪುಟ್ಟ ಭೂಮಾಲಕರಿಗೆ ಅದರಲ್ಲೂ ಅಂಗವಿಕಲರಿಗೆ ಮತ್ತು ಮುದಿ ವಯರಿಗೆ ಸರಕಾರಿ ಖಜಾನೆಯಿಂದ ಏಕ ಗಂಟಿನಲ್ಲಿ ಪರಿಹಾರ ಒದಗಿಸಬೇಕು. ಕೃಷಿ ಕಾರ್ಮಿಕರಿಗೆ 8-00 ರೂಪಾಯಿ ಕನಿಷ್ಠಕೂಲಿ ನಿರ್ಣಯ ಜ್ಯಾರಿಗೊಳಿಸಬೇಕು. ಮಿಗತೆ ಮತ್ತು ಬಂಜರು ಭೂಮಿಯನ್ನು ಕೃಷಿಕಾರ್ಮಿಕರಿಗೂ ಬಡ ರೈತರಿಗೂ ಹಂಚಿಕೊಡಬೇಕು. ರೈತ ಸಂಘಗಳ ಪ್ರತಿನಿಧಿಗಳನ್ನು ಭೂನ್ಯಾಯಮಂಡಳಿಗಳಲ್ಲಿ ಸೇರಿಸಬೇಕು. ಇವೇ ಮೊದಲಾದ ತಿದ್ದುಪಡಿಗಳನ್ನು ಕರ್ನಾಟಕ ಭೂಸುಧಾರಣಾ ಕಾಯಿದೆಯಲ್ಲಿ ತ್ವರಿತವಾಗಿ ಮಾಡುವ ಬಗ್ಗೆ ಸರಕಾರವನ್ನು ಒತ್ತಾಯಿಸಲು ಪ್ರಬಲವಾದ ಚಳುವಳಿಯೊಂದನ್ನು ಸಂಘಟಿಸಲು ಜನಜಾಗೃತಿ ಬೆಳೆಸುವುದು "ಜೀಪ್‌ಜಾಥಾ"ದ ಮುಖ್ಯ ಉದ್ದೇಶವಾಗಿತ್ತು. ಹೋದೆಡೆಯಲ್ಲಿ ಎಲ್ಲಾ ಕಡೆಗಳಲ್ಲೂ ರೈತರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದು ಸ್ವಾಗತಿಸುತ್ತಿದ್ದರು. ಕೃಷಿ ಕೂಲಿಗಾರರಿಗೆ, ದೀನದಲಿತರಿಗೆ, ಹರಿಜನ ಗಿರಿಜನರಿಗೆ ಕಾಂಗ್ರೆಸ್ ಸರಕಾರ ಕೊಡುತ್ತಿದ್ದ ಆಶ್ವಾಸನೆಗಳು ಎಷ್ಟು ಪೊಳ್ಳಾಗಿತ್ತೆಂಬುದನ್ನು ನಾವು ಹೋದೆಡೆಯಲ್ಲಿ ಎಲ್ಲಾ ಕಡೆಗಳಲ್ಲಿ ಕೂಡಾ ಒಂದೇರೀತಿಯ ಸಮಸ್ಯೆಗಳು ಜನಸಾಮಾನ್ಯರನ್ನು ಬಾಧಿಸುತ್ತಿರುವುದನ್ನು ಕಂಡೆವು.

"ಜೀಪ್ ಜಾಥಾ"ವನ್ನು ಕಂಡು ದಾರಿಯುದ್ದಕ್ಕೂ ದುಡಿಯುವ ಜನತೆಗೆ, ವಿದ್ಯಾರ್ಥಿಗಳಿಗೆ, ಪ್ರಜಾಪ್ರಭುತ್ವ ಪ್ರೇಮಿಗಳಿಗೆ ಬಹಳ ಸಂತೋಷವಾಗುತ್ತಿತ್ತು. ಕೈಯೆತ್ತಿ, ಕೈಬೀಸಿ ತಮ್ಮ ಅಭಿನಂದನೆಗಳನ್ನು ಸೂಚಿಸುತ್ತಿದ್ದರು. ಸಂತೋಷ ವ್ಯಕ್ತಪಡಿಸುತ್ತಿದ್ದರು. ಇದರಿಂದಾಗಿ ನಮಗೆ ಮಾರ್ಗದ ಆಯಾಸವಾಗಲಿ ಒಂದು ವಾರದವರೆಗೆ ಮನೆ ಬಿಟ್ಟು ಚಿಂತೆಯ ಬಗ್ಗೆಯಾಗಲೀ ನಮಗೆ ನೆನಪೆ ಬರುತ್ತಿರಲಿಲ್ಲ.

20 ಸಾವಿರಕ್ಕೂ ಮಿಕ್ಕಿದ ಕರಪತ್ರಗಳನ್ನು (ನಾವು ಮುದ್ರಿಸಿದ್ದೆವು ಅದೂ ಸಾಲದಾಯಿತು.) ಹಂಚಲಾಯಿತು.

ಕಳೆದ 30 ವರ್ಷಗಳ ರೈತ ಚಳುವಳಿಯ ಪರಂಪರೆ ದ. ಕ. ಜಿಲ್ಲೆಗಿದೆ. ಹೋರಾಟದಲ್ಲಿ ಪಳಗಿದ ನೇತೃತ್ವವಿದೆ. ಯುವಕ ಮುಂದಾಳುಗಳಿದ್ದಾರೆ. ಸಮಸ್ಯೆಯನ್ನು ಅರಿತಿದ್ದಾರೆ, ಅರಿಯುತ್ತಿದ್ದಾರೆ, ತಿಳಿಯುವ ಪ್ರಾಮಾಣಿಕತೆಯಿದೆ. ತ್ಯಾಗ ಬಲಿದಾನಗಳ ಹಿನ್ನೆಲೆಯಿದೆ. ಕಾನೂನು ಇಲ್ಲದ ಕಾಲದಲ್ಲೂ ಭೂಮಿಗೋಸ್ಕರ ಹೋರಾಟ ನಡೆದಿದೆ.

ರೈತ ಚಳುವಳಿಯಲ್ಲಿ ಇದೊಂದು ಅಪೂರ್ವ ಸಂದರ್ಭ, "ಜೀಪ್ ಜಾಥಾ"ದಲ್ಲಿ ಪಡೆದ ಅನುಭವಗಳನ್ನು ಕ್ರೋಢೀಕರಿಸಬೇಕು. ದುಡಿಯುವ ಜನತೆಯ ನ್ಯಾಯವನ್ನು ಎತ್ತಿ ಹಿಡಿಯಲು ಹೋರಾಟವಲ್ಲದೆ ಬೇರೆ ದಾರಿಯಿಲ್ಲ. ಹೋರಾಟದ ಮೂಲಕ ಜಯಗಳಿಸಲು ಸಾಧ್ಯ ಎಂಬುದನ್ನು ರೈತರ ಅನುಭವವೇ ತೋರುತ್ತಿತ್ತು. ಹೋರಾಟದ ಕರೆಯನ್ನು ಯಶಸ್ವಿಗೊಳಿಸಲು ರೈತರ ಹೋರಾಟಗಳನ್ನೂ ತೀವ್ರಗೊಳಿಸಿ ಸಂಘಟನೆ ಬೆಳೆಸಿ ವಿಸ್ತರಿಸುವ ದೃಷ್ಟಿಯಿಂದ "ಜೀಪ್ ಜಾಥಾ" ಅತ್ಯಂತ ಯಶಸ್ವಿಯಾಗಿದೆ ಎನ್ನಬಹುದು.

ಬೆಳ್ತಂಗಡಿಯ ಕೆ. ವಿ. ರಾವ್, ಕುಂದಾಪುರದ ಶಂಕರ, ಕಾರ್ಕಳದ ದಿವಾಕರ, ಉಡುಪಿಯ ರಾಮ ಕೆ. ಕುಂದರ್, ಪುತ್ತೂರಿನ ವಿಷ್ಣುಮೂರ್ತಿ, ಸುಳ್ಯದ ಸೂರ್ಯನಾರಾಯಣ ಭಟ್ ಮತ್ತು ಮೋನಪ್ಪ ಗೌಡ, ಬಂಟ್ವಾಳದ ನಾರಾಯಣ ಮತ್ತು ವೈ. ನಾರಾಯಣ ಭಟ್, ಮಂಗಳೂರಿನ ಪೂವಪ್ಪ ಸಾಲಿಯಾನ್, ಕೊರಗಪ್ಪ ರೈ, ಯು.ಬಿ. ಲೋಕಯ್ಯ ಮೊದಲಾದವರು ಸಂಪೂರ್ಣ ಸಹಕಾರ ನೀಡಿ ಸಹಕರಿಸಿದ್ದಾರೆ.

"ಜೀಪ್ ಜಾಥಾ"ದ ಪ್ರಚಾರ ಕ್ರಮದಿಂದ ರೈತರ ಮಧ್ಯೆ ನವಚೈತನ್ಯ ಬೆಳೆದು ಬಂದಿದೆ. ರೈತಚಳುವಳಿ ಮುಂದೆ ಹೋಗಲು ಅನುಕೂಲವಾಗಿದೆ. ಹೋರಾಟದ ಕಾರ್ಯಕ್ರಮಗಳನ್ನು ನಿರೂಪಿಸಿ ಜಿಲ್ಲೆಯ ರೈತಾಪಿ ಜನತೆಯಲ್ಲಿರುವ ಅತೃಪ್ತಿಗೆ ಸಂಘಟಿತ ರೂಪ ಕೊಡುವ ಜವಾಬ್ದಾರಿ ರೈತಸಂಘದ ಮುಂದಿದೆ. ತ್ವರಿತದಲ್ಲಿ ಈ ಕೆಲಸಕ್ಕೆ ಮುಂದಾಗಬೇಕಾಗಿದೆ. □

ಉಡುಪಿಯ ಬೀಡಿಕಾರ್ಮಿಕರ ಸಂಘದ ವಾರ್ಷಿಕ ಮಹಾಸಭೆ

ಉಡುಪಿಯ ಬೀಡಿ ಅಂಡ್ ಟೊಬ್ಯಾಕೋ ಲೇಬರ್ ಯೂನಿಯನ್‌ನ ವಾರ್ಷಿಕ ಮಹಾಸಭೆಯು 25-2-79 ರಂದು ಕೊಡವೂರು ಗ್ರಾಮದ ಮೂಡಬೆಟ್ಟು ಶಾಲೆಯ ವಠಾರದಲ್ಲಿ ಕಾಂ॥ ಅಂಗರ [illegible]

ಪ್ರಾರಂಭದಲ್ಲಿ ಕಾರ್ಯದರ್ಶಿಯವರು ಕಳೆದ ಮಹಾಸಭೆಯ ನಂತರದ ಚಟುವಟಿಕೆಯ ವರದಿಯನ್ನು ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದಿಟ್ಟರು. ಅತಿಥಿಗಳಾಗಿ ಬಂದಿದ್ದ ವಿಮಾನೌಕರರ ಸಂಘದ ಮುಂದಾಳು ಕಾಂ॥ ಬಿ. ಮಾದವ, ನೇಯ್ಗೆ ಕೆಲಸಗಾರರ ಸಂಘದ ಅಧ್ಯಕ್ಷ ಕಾಂ॥ ವೆಂಕಟಪ್ಪ ಮೊದಲಾದವರು ಶುಭಕೋರಿ ಮಾತನಾಡಿದರು.

ದುಡಿಯುವ ಮಹಿಳೆಯರ ಸಮ್ಮೇ[illegible] ಶಾರದಾ, ಲಲಿತ, ವನಜ, ಸುನಂದ, ಮಾಲತಿ, ಅಮಣಿ ಇವರನ್ನು ಆರಿಸಲಾಯಿತು. ಸಿ.ಐ.ಟಿ.ಯು.ನ ಮದರಾಸ್ ಸಮ್ಮೇಳನಕ್ಕೆ ಕಾಂ॥ ಡೇವಿಡ್ ಎ. ಕರ್ಕಡ ಮತ್ತು ಗೋಪಾಲ ಚಿತ್ತನ್ ಅವರನ್ನು ಪ್ರತಿನಿಧಿಗಳಾಗಿ ಆರಿಸಲಾಯಿತು.

ನಂತರ ಮುಂದಿನ ವರ್ಷದ ಆಡಳಿತ ಸಮಿತಿಗೆ ಪದಾಧಿಕಾರಿಗಳು ಮತ್ತು ಸದಸ್ಯರನ್ನು ಆರಿಸಲಾಯಿತು. —

ಕೋಲಾರ ಜಿಲ್ಲಾಸಮಿತಿ ಸಭೆ

ಪಕ್ಷದ ಕೋಲಾರ ಜಿಲ್ಲಾಸಮಿತಿಯ ವಿಸ್ತೃತ ಸಭೆಯು ಫೆಬ್ರುವರಿ 25ರಂದು ಕಾ॥ ಎಸ್. ಲಕ್ಷ್ಮಯ್ಯನವರ ಅಧ್ಯಕ್ಷತೆಯಲ್ಲಿಸೇರಿತ್ತು. ಸಿ. ಐ. ಟಿ. ಯು. ನ ರಾಜ್ಯ ಮಂಡಳಿಯ ಅಧ್ಯಕ್ಷರಾದ ಕಾ॥ ಸೂರ್ಯನಾರಾಯಣ ರಾವ್ ಮತ್ತು ಕಾರ್ಮಿಕ ನಾಯಕರಾದ ಕಾ॥ ವಿ.ಜೆ.ಕೆ. ನಾಯರ್ ಅವರು ಉಪಸ್ಥಿತರಾಗಿದ್ದರು. ಜಿಲ್ಲಾಸಮಿತಿಯ ಕಾರ್ಯದರ್ಶಿಗಳಾದ ಕಾ॥ ಎಸ್. ಸವರಿದಾಸ್ ಅವರು ವರದಿಯನ್ನು ಓದಿದ ನಂತರ ಕಾ॥ ಸೂರ್ಯನಾರಾಯಣ ರಾವ್ ಅವರು ಪ. ಬಂಗಾಳದ ಹೌರಾದಲ್ಲಿ ನಡೆದ ಪಕ್ಷದ ಪ್ಲೀನಮ್‌ನಲ್ಲಿ ನಡೆದ ಚರ್ಚೆ ಮತ್ತು ಅಲ್ಲಿ ಕೈಗೊಂಡ ನಿರ್ಣಯಗಳನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಜಿಲ್ಲೆಯಲ್ಲಿ ರೈತಸಂಘ ಕಾರ್ಮಿಕಸಂಘಗಳನ್ನು ಬಲಪಡಿಸಬೇಕೆಂದು, ಭೈರಾಬಂಡೆಯ ಮೊಕದ್ದಮೆಯ ವಿಚಾರದಲ್ಲಿ ಹಣ ಸಂಗ್ರಹ ಮಾಡಬೇಕೆಂದು ತೀರ್ಮಾನ ಕೈಗೊಳ್ಳಲಾಯಿತು.

* * *

ಸಮಾವೇಶ ಅಂಗೀಕರಿಸಿದ ದುಡಿಯುವ ಮಹಿಳೆಯರ ಬೇಡಿಕೆಗಳ ಪಟ್ಟಿ

1. ಉದ್ಯೋಗದ ಹಕ್ಕು ಸಿಗಬೇಕು ಮತ್ತು ಇದನ್ನು ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕನ್ನಾಗಿ ಸೇರಿಸಬೇಕು.

2. ಪ್ರತಿಯೊಬ್ಬ ದುಡಿಯುವ ಮಹಿಳೆಯೂ ಕೃಷಿ ಕೂಲಿಗಾರರಿಗೂ ಸೇರಿ ದಿನಕ್ಕೆ ಎಂಟುಗಂಟೆ ಮಾತ್ರ ಕೆಲಸ ಇರುವಂತಾಗಬೇಕು.

3. ಎಲ್ಲಾ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೂ ಸಮಾನ ವೇತನ ಸಿಗುವಂತಾಗಬೇಕು. ವೇತನ ಬಡ್ತಿ, ತರಬೇತಿ, ನೋಡುವ ದೃಷ್ಟಿ ಎಲ್ಲದರಲ್ಲೂ ಇರುವ ತಾರತಮ್ಯ ಇಲ್ಲದಂತಾಗಬೇಕು.

4. ಎಲ್ಲಾ ಕೈಗಾರಿಕೆಗಳಲ್ಲೂ ಈಗ ಎಷ್ಟು ಸಂಖ್ಯೆಯಲ್ಲಿ ಮಹಿಳೆಯರು ದುಡಿಯುತ್ತಿದ್ದಾರೋ, ಆ ಸಂಖ್ಯೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಇಷ್ಟೇ ಅಲ್ಲದೆ ಈ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚುವಂತೆ ಕ್ರಮ ಕೈಗೊಳ್ಳಬೇಕು.

5. ಎಲ್ಲಾ ದುಡಿಯುವ ಮಹಿಳೆಯರಿಗೂ ಹೆರಿಗೆ ಸಮಯದಲ್ಲಿ 4 ತಿಂಗಳ ರಜೆ, ಜೊತೆಗೆ ಆ ರಜೆಯ ಕಾಲದಲ್ಲಿ ಸಂಬಳ ಸಿಗುವಂತಾಗಬೇಕು. ಜೊತೆಗೆ ಹೆರಿಗೆಗೆ ಮೊದಲು ಮತ್ತು ಆ ನಂತರ ಉಚಿತ ವೈದ್ಯಕೀಯ ಚಿಕಿತ್ಸೆ ದೊರಕುವಂತಾಗಬೇಕು.

6. ಲೇಬರ್ ಕಾನೂನುಗಳಲ್ಲಿ ದುಡಿಯುವ ವರ್ಗದವರಿಗೆ ಹೆಚ್ಚು ಉಪಯೋಗವಾಗುವಂತೆ ಹೆಚ್ಚು ಬದಲಾವಣೆಗಳಾಗಬೇಕಾಗಿದೆ. ಅಲ್ಲದೆ ಈ ಕಾನೂನುಗಳನ್ನು ಉಲ್ಲಂಘಿಸುವ ಎಲ್ಲಾ ಮಾಲೀಕರಿಗೂ ಕಡ್ಡಾಯವಾಗಿ ಶಿಕ್ಷೆ ಕೊಡಬೇಕು. ಹೊಸ ಕಾನೂನುಗಳಾಗುವವರೆಗೆ ಈಗ ಇರುವ ಕಾನೂನುಗಳು ಸರಿಯಾಗಿ ಜ್ಯಾರಿಯಲ್ಲಿವೆಯೇ ಎಂಬುದನ್ನು ಪರಿಶೀಲಿಸಲು ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡೂ ಪರಿಶೀಲನಾ ಮಂಡಲಿಗಳನ್ನು ನೇಮಿಸಿ ಶ್ರಮಿಕ ವರ್ಗದವರಿಗೆ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟಬೇಕು.

7. ಎಲ್ಲಾ ದುಡಿಯುವ ಮಹಿಳೆಯರ ಮಕ್ಕಳಿಗಾಗಿ "ಕ್ರಶ್" (ಶಿಶು ಪಾಲನಾ ಕೇಂದ್ರ) ಗಳನ್ನು ಖಡ್ಡಾಯವಾಗಿ ಒದಗಿಸಬೇಕು. ಅಲ್ಲದೆ ಕೆಲಸದ ನಡುವೆ ತಾಯಂದಿರಿಗೆ ಎದೆಹಾಲು ಕುಡಿಯುವ ಮಕ್ಕಳಿದ್ದರೆ ಅವಶ್ಯಕವಿರುವ ಬಿಡುವು ಕೊಡಬೇಕು. ಮಕ್ಕಳನ್ನು ನೋಡಿಕೊಳ್ಳಲು ಸಮರ್ಥ ದಾದಿಯರನ್ನು ನೇಮಿಸಬೇಕು. ಕೃಷಿ ಕೂಲಿಗಾರರಿಗೆ ಮತ್ತು ಪ್ಲಾಂಟೇಷನ್ ಕೆಲಸಗಾರರಿಗೆ ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ಒದಗಿಸಬೇಕು.

8. ವಿಶ್ರಾಂತಿ ಗೃಹಗಳು, ಕುಡಿಯುವ ನೀರಿನ ವ್ಯವಸ್ಥೆ ಮೂತ್ರ ದೊಡ್ಡಿ ವ್ಯವಸ್ಥೆ ಮಹಿಳೆಯರು ದುಡಿಯುವ ಜಾಗದಲ್ಲಿ ಇರಬೇಕು.

9. ಎಲ್ಲಾ ಕೈಗಾರಿಕೆಗಳಲ್ಲಿ ದುಡಿಯುವ ಮಹಿಳೆಯರಿಗೆ ವಸತಿ ಸೌಕರ್ಯ ಒದಗಿಸಬೇಕು, ಗ್ರಾಮಾಂತರ ಪ್ರದೇಶಗಳಲ್ಲೂ ಇದು ಸಿಗುವಂತಾಗಬೇಕು.

10. ದುಡಿಯುವ ಮಹಿಳೆಯರ ಮಕ್ಕಳಿಗಾಗಿ ನರ್ಸರಿ, ಬಾಲವಾಡಿ, ಅಥವಾ ಶಿಶುವಿಹಾರಗಳನ್ನು ಉಚಿತವಾಗಿ ಒದಗಿಸಿಕೊಡಬೇಕು.

11. ಕಾರ್ಖಾನೆ ಮಿಲ್ಲು/ಅಥವಾ ಗಣಿಗಳಲ್ಲಿ ಕೆಲಸ ಮಾಡುವ ಹೆಂಗಸರಿಗೆ ರಾತ್ರೆ ಹೊತ್ತು ಕೆಲಸ ಮಾಡಿಸುವ ಪದ್ಧತಿ ಸಂಪೂರ್ಣ ರದ್ದಾಗಬೇಕು.

12. ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡರಲ್ಲೂ ದುಡಿಯುವ ಮಹಿಳೆಯರಿಗೆ ಎಲ್ಲ ತರದ ರಕ್ಷಣೆ ದೊರೆಯುವಂತಾಗಬೇಕು. ಈ ತರದ ರಕ್ಷಣೆ ಕೊಡುವ ಹೊಣೆ ಸರಕಾರದ ಮೇಲೆ ಇರುವಂತೆ ಕಾನೂನು ಮಾಡಬೇಕು.

13. ದುಡಿಯುವ ಮಹಿಳೆಯರನ್ನು ಅನಾರೋಗ್ಯದ ಕುತ್ತುಗಳಿಂದ ರಕ್ಷಿಸುವ ಕ್ರಮ ಕೈಗೊಳ್ಳಬೇಕು. ಅದರಲ್ಲೂ ಬೀಡಿ, ತಂಬಾಕು ಉದ್ಯಮಗಳಲ್ಲಿ ಕೆಲಸ ಮಾಡುವ, ಚರ್ಮ ಹದ ಮಾಡುವ ಕಾರ್ಖಾನೆ, ಕಲ್ಲಿದ್ದಲು, ರಾಸಾಯನಿಕ ವಸ್ತುಗಳ ತಯಾರಿಕೆ, ಸಿಮೆಂಟು ಗಣಿ ಕೈಗಾರಿಕೆಗಳಲ್ಲಿರುವ ಮಹಿಳೆಯರಿಗೆ ವಿಶೇಷವಾದ ವೈದ್ಯಕೀಯ ರಕ್ಷಣೆ ಸಿಗುವಂತಾಗಬೇಕು.

14. ದುಡಿಯುವ ಮಹಿಳೆಗೆ ಉಚಿತ ತರಬೇತಿ ಸೌಲಭ್ಯ ಸಿಗುವಂತಾಗಬೇಕು. ಅವರು ದುಡಿಯುವಲ್ಲಿ ಹೆಚ್ಚಿನ ತಾಂತ್ರಿಕ ಜ್ಞಾನವನ್ನು ಪಡೆಯುವ ಅವಕಾಶ ಅವರಿಗೆ ಸಿಗಬೇಕು. ಅಲ್ಲದೆ ತರಬೇತಿಯ ಕಾಲದಲ್ಲಿ ಪೂರ್ಣ ಸಂಬಳ ಸಿಗುವಂತಾಗಬೇಕು.

15. ಮಹಿಳೆಯರು ದುಡಿಯುತ್ತಿರುವ ಕಡೆಗಳಲ್ಲಿ ಕಾರ್ಮಿಕರ ಸಂಘಟನೆಗಳ ಕಾರ್ಯಕಾರಿ ಸಮಿತಿಯಲ್ಲಿ ಮಹಿಳೆಯರಿಗೆ ಕನಿಷ್ಟಪಕ್ಷ ಒಂದು ಸ್ಥಾನ, ವಾದರೂ ಇರಬೇಕು. ಇದು ಕಡ್ಡಾಯ ನಿಯಮವಾಗಬೇಕು.

16. ಇ.ಎಸ್.ಐ., ಕ್ಷಯರೋಗದ ಮತ್ತು ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಕೆಲವು ಹಾಸಿಗೆಗಳನ್ನಾದರೂ ಹೆಂಗಸರಿಗಾಗಿ ಮೀಸಲಾಗಿಡಬೇಕು.

17. ಸಮಾಜ ಕಲ್ಯಾಣ ಅಥವಾ ಕಾರ್ಮಿಕ ಕಲ್ಯಾಣಕ್ಕಾಗಿ ನಿಯಮಿಸಲ್ಪಡುವ ಸರಕಾರಿ ಅಥವಾ ಭಾಗಶಃ ಸರ್ಕಾರಿ ಆಯೋಗ, ಸಮಿತಿಗಳೆಲ್ಲದರಲ್ಲೂ ಒಂದು ಸ್ಥಾನವಾದರೂ ಮಹಿಳಾ ಪ್ರತಿನಿಧಿಗಳಿಗೆ ಮೀಸಲಾಗಬೇಕು.

18. ಅಸಂಘಟಿತ ದುಡಿಯುವ ಮಹಿಳೆಯರ ಹಿತ ರಕ್ಷಣೆಗಾಗಿ ಕನಿಷ್ಟ ವೇತನ, ಹೆರಿಗೆ ಭತ್ಯೆ, ಎಂಟು ಗಂಟೆಗಳ ಕೆಲಸ, ರಜಾ ಸೌಲಭ್ಯ ವೈದ್ಯಕೀಯ ಸೌಲಭ್ಯ ಇವೆಲ್ಲವೂ ಸಿಗುವಂತಾಗಬೇಕು.

19. ಸಮಾನ ವೇತನ ಮತ್ತು ಹೆರಿಗೆ ಭತ್ಯ ಕೊಡಲು ಇಷ್ಟವಿಲ್ಲದೆ ಹೆಂಗಸರನ್ನು ಕೆಲಸದಿಂದ ಕಿತ್ತೊಗೆಯುವ, ಮದುವೆಯಾದರೆ ಕೆಲಸದಿಂದ ಕಿತ್ತೊಗೆಯುವೆವೆಂದು ಹೇಳುವ ಮಾಲೀಕರನ್ನು ಶಿಕ್ಷಿಸಬೇಕು.

20. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ದುಡಿಯುವ ಮಹಿಳೆಯರಿಗಾಗಿ ಸರ್ಕಾರವು ಹಾಸ್ಟೆಲುಗಳನ್ನು ಕಟ್ಟಿಸಬೇಕು.

ದುಡಿಯುವ ಮಹಿಳೆಯರ ಸಮಾವೇಶ

(2ನೇ ಪುಟದಿಂದ)

ಯು. ಮುಂದಾಗಿದೆ. ಮದ್ರಾಸಿನಲ್ಲಿ 1979 ಏಪ್ರಿಲ್ 9 ಮತ್ತು 10 ರಂದು ನಡೆಯಲಿರುವ ದುಡಿಯುವ ಮಹಿಳೆಯರ [illegible] ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯದ ದುಡಿಯುವ ಮಹಿಳೆಯರ ಸಮ್ಮೇಳನವು ಮಾರ್ಚ್ 10 ಮತ್ತು 11 ರಂದು ಸಿ. ಐ. ಟಿ. ಯು. ವಿನ ಮಾರ್ಗದರ್ಶನದಲ್ಲಿ ಮಂಗಳೂರಿನಲ್ಲಿ ನಡೆಯಿತು.

ಮಂಗಳೂರಿನಲ್ಲಿ ಭಿಕ್ಷು ಲಕ್ಷ್ಮಣ ಭವನದಲ್ಲಿ ಸೇರಿದ್ದ ಸಮ್ಮೇಳನಕ್ಕೆ ರಾಜ್ಯದ ನಾನಾ ಭಾಗಗಳಿಂದಲೂ, ಬೇರೆ ಬೇರೆ ಉದ್ಯಮಗಳಿಂದಲೂ, 339 ಮಹಿಳಾ ಪ್ರತಿನಿಧಿಗಳು ಮತ್ತು 13 ವೀಕ್ಷಕರು ಬಂದಿದ್ದರು. ಮಂಗಳೂರಿನ ಕಾರ್ಮಿಕ ಮುಂದಾಳು ಕಾ॥ ಜಾನಮ್ಮನವರು ಧ್ವಜಾರೋಹಣ ಪ್ರಾರ್ಥನೆಗರೊಂದಿಗೆ ಸಮ್ಮೇಳನ ಮಹಿಳೆಯರು ಅಧ್ಯಕ್ಷೆ [illegible] ಆಯ್ಕೆ ಆದ ಮೇಲೆ, ಸ್ವಾಗತ ಸಮಿತಿಯ ಅಧ್ಯಕ್ಷೆ ಕಾ॥ ಕಾವೇರಮ್ಮನವರು ಸ್ವಾಗತ ಭಾಷಣ ಮಾಡಿದರು.

ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮ್ಮೇಳನದ ಸಂಚಾಲಕಿ ಕಾ॥ ವಿಮಲಾರಣದಿವೆಯವರು ಉದ್ಘಾಟನೆ ಮಾಡಿದರು. ಉದ್ಘಾಟನಾ ಭಾಷಣ ಮಾಡುತ್ತಾ, ರಾಷ್ಟ್ರದಲ್ಲಿ ದುಡಿಯುವ ಮಹಿಳೆಯರ ಸಮಸ್ಯೆ ಬಗ್ಗೆ ಗಮನ ಹರಿಸಿ, ಅವರ ಸಮಸ್ಯೆಗಳ ಪರಿಹಾರಕ್ಕಾಗಿಯೂ, ಮಹಿಳೆಯರ ಮುಂದಾಳ್ತನವನ್ನು ಬೆಳೆಸುವುದಕ್ಕೂ ಸಿ.ಐ.ಟಿ.ಯು. ಮಾತ್ರ ಮುಂದಾಗಿದೆ ಎಂದು, ಇದು ಹೆಮ್ಮೆಯ ವಿಚಾರ ಎಂದರು. ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ವಿವರಿಸುತ್ತಾ, ಕಾನೂನುಗಳು ಜಾರಿಯಾಗುವುದರಲಿ ಬದಲು ದುಡಿಯುವ ಮಹಿಳೆಯರ ಸಂಕಷ್ಟಗಳು ಇನ್ನೂ ಹೆಚ್ಚಾಗಿವೆಯೆಂದರು. ಮಹಿಳೆಯರ ಸಾರ್ವತ್ರಿಕ ವಿಮೋಚನೆಯಾಗಬೇಕಾದರೆ ಸಮಾಜವಾದ ಪದ್ಧತಿಯು ಜಾರಿಗೆ ಬರಬೇಕು. ಮಹಿಳೆಯರ ಸಾರ್ವತ್ರಿಕ ವಿಮೋಚನೆಗೆ ಸ್ಫೂರ್ತಿಯಾಗಿ, ಹೋರಾಟ ಶಕ್ತಿಯಾಗಿ ದುಡಿಯುವ ಮಹಿಳೆಯರು ಸಂಘಟಿತವಾಗಬೇಕು. ಇವರ ಮುಂದಾಳುತ್ವ ಬೆಳೆಯಬೇಕು. ಕಾರ್ಮಿಕ ಸಂಘಟನೆಗಳಲ್ಲಿ, ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿರುವಲ್ಲೂ, ಇವರ ಸಕ್ರಿಯ ಪಾತ್ರವಿಲ್ಲದೆ ಇದ್ದುದರಿಂದ, ಇವರ ಸಮಸ್ಯೆಗಳ ಬಗ್ಗೆಯೂ ಗಮನ ಹರಿಸಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸುವುದೇ ಸಮ್ಮೇಳನದ ಉದ್ದೇಶವೆಂದರು.

ಉದ್ಘಾಟನಾ ಭಾಷಣವಾದಮೇಲೆ ದುಡಿಯುವ ಜನತೆಯ ಏಳಿಗೆಗಾಗಿ ಜೀವತೆತ್ತ ಮಹಿಳೆಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯ್ತು.

10 ರಂದು ಮಧ್ಯಾಹ್ನದ ಮೇಲೆ ಕಾ॥ ಎಸ್. ಮಾಲತಿಯವರು ವರದಿಯನ್ನು ಮಂಡಿಸಿದರು. 10 ರಂದು ಸಂಜೆ ಮತ್ತು 11ರ ಮಧ್ಯಾಹ್ನದ ತನಕ ನಡೆದ ವರದಿಯ ಮೇಲಿನ ಚರ್ಚೆಯಲ್ಲಿ 62 ಮಂದಿ ಮಹಿಳಾ ಪ್ರನಿಧಿಗಳು ಭಾಗವಹಿಸಿದರು. ಚರ್ಚೆಯಲ್ಲಿ ಭಾಗವಹಿಸಿದ ಸಂಖ್ಯೆ, ತೋರಿದ ಉತ್ಸಾಹಗಳು ಸಮ್ಮೇಳನವು ಯಶಸ್ವಿಯಾಯಿತೆಂಬುದಕ್ಕೆ ಉದಾಹರಣೆ. ಹಾಗೆಯೇ ಕಾ॥ ಎಸ್. ಮಾಲತಿಯವರು 20 ಅಂಶಗಳ ಬೇಡಿಕೆಯ ಪಟ್ಟಿಯನ್ನು ಮಂಡಿಸಿದರು. ಚರ್ಚೆಯು ಮುಗಿದ ಮೇಲೆ ಬೇಡಿಕೆಯ ಪಟ್ಟಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯ್ತು. ಈ ಬೇಡಿಕೆಗಳನ್ನು ಪಡೆಯಲು ರಾಜ್ಯದಾದ್ಯಂತ ದುಡಿಯುವ ಮಹಿಳೆಯರ ವಿಶಾಲ ತಳಹದಿಯ ಸಂಘಟನೆ, ಹೋರಾಟ ನಡೆಸಲೂ ತೀರ್ಮಾನಿಸಲಾಯ್ತು.

ಸಮ್ಮೇಳನವು ಈ ಕೆಳಗಿನ ಗೊತ್ತುವಳಿಗಳನ್ನು ಅಂಗೀಕರಿಸಿತು :

(1) ಕೇಂದ್ರ ಮುಂಗಡ ಪತ್ರದ ಖಂಡನೆ.

(2) ಕೇಂದ್ರ ಸರಕಾರದ ಕೈಗಾರಿಕಾ ಸಂಬಂಧ ಮಸೂದೆ ಮತ್ತು ಕರ್ನಾಟಕ [illegible] ಕ್ಷೇತ್ರಗಳಲ್ಲಿ ಕಾರ್ಮಿಕ ವಿರುದ್ಧ ಪ್ರತಿಭಟನೆ.

(3) ಬಹು ಸಂಖ್ಯೆಯಲ್ಲಿ ದುಡಿಯುವ ಮಹಿಳೆಯರಿಂದ ಕೂಡಿದ ಹಾಸನ ಕಾಫಿ ಕ್ಯೂರಿಂಗ್ ಸಂಸ್ಥೆಯ ಕಾರ್ಮಿಕರ ದೀರ್ಘ ಕಾಲದಿಂದ ನಡೆಯುತ್ತಲಿರುವ ಹೋರಾಟಕ್ಕೆ ಬೆಂಬಲ.

(4) ಗೇರುಬೀಜ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಮೇಲೆ ನಡೆಯುತ್ತಿರುವ ಅನ್ಯಾಯದ ಖಂಡನೆ.

(5) ಇರಾನಿನ ಖೊಮೇನಿ ಸರಕಾರವು ಮಹಿಳೆಯರು ಖಡ್ಡಾಯವಾಗಿ ಘೋಷ ಧರಿಸಬೇಕೆಂದು ಸುಗ್ರೀವಾಜ್ಞೆ ಹೊರಡಿಸಿದ್ದು ಮತ್ತು ಇದನ್ನು ಪ್ರತಿಭಟಿಸಿದ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಸಿದ್ದರ ಖಂಡನೆ.

ಸಮ್ಮೇಳನದ ಕೊನೆಗೆ ಚರ್ಚೆಗೆ ಉತ್ತರವನ್ನು ಕಾ॥ ಎಸ್. ಮಾಲತಿಯವರಿತ್ತರು. ದುಡಿಯುವ ಮಹಿಳೆಯರನ್ನು ಸಂಘಟಿಸಲು ಕಾ॥ ಎಸ್. ಮಾಲತಿಯವರು ಸಂಚಾಲಕರಾಗಿರುವ 25 ಮಂದಿಯ ಸಮನ್ವಯ ಸಮಿತಿಯನ್ನು ಚುನಾಯಿಸಲಾಯ್ತು. ಕಾ॥ ವಿಮಲಾರಣದಿವೆಯವರ ಸಮಾರೋಪ ಭಾಷಣದೊಂದಿಗೆ ಸಮ್ಮೇಳನವು ಮುಕ್ತಾಯವಾಯಿತು.

ಮೆರವಣಿಗೆ, ಬಹಿರಂಗ ಸಭೆ

ದಿನಾಂಕ 11 ರಂದು ಸಂಜೆ ನಗರದ ಮುಖ್ಯ ರಸ್ತೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸೇರಿದ್ದ ಮಹಿಳೆಯರ ಮೆರವಣಿಗೆ ನಡೆಯಿತು. ಇದೊಂದು ಅಭೂತಪೂರ್ವ ದೃಶ್ಯವಾಗಿತ್ತು. ಸಂಜೆ 7 ಗಂಟೆಗೆ ನೆಹರು ಮೈದಾನದಲ್ಲಿ ಸೇರಿದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾ॥ ಕಾವೇರಮ್ಮ ವಹಿಸಿದ್ದರು. ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ರಾಜ್ಯ ಸಮನ್ವಯ ಸಮಿತಿಯ ಸದಸ್ಯೆ ಕಾ॥ ಸಿ. ಎಸ್. ಲಲಿತ, ಸಂಚಾಲಕಿ ಕಾ॥ ಮಾಲತಿ, ಹಾಸನದ ಕಾ॥ ಚಂಪಾ ಇವರುಗಳು ಭಾಷಣ ಮಾಡಿದರು. ಮುಖ್ಯ ಭಾಷಣಗಾರರಾದ ಕಾ॥ ವಿಮಲಾರಣದಿವೆಯವರು ದುಡಿಯುವ ಮಹಿಳೆಯರ ಪಾತ್ರವನ್ನು ವಿವರಿಸಿ, ಸಂಘಟನೆ ಮತ್ತು ಹೋರಾಟಗಳನ್ನು ಬೆಳೆಸಲು ಕರೆಯಿತ್ತರು. ಕಾ॥ ರಾಮಚಂದ್ರರಾವ್ ಇವರು ಸಿ.ಐ.ಟಿ.ಯು. ಪರವಾಗಿ ಶುಭ ಕೋರಿ ಮಾತನಾಡಿದರು.

ಮಂಗಳೂರಿನಲ್ಲಿ ನಡೆದ ಸಮ್ಮೇಳನವು ಎಲ್ಲಾ ರೀತಿಯಲ್ಲೂ ಯಶಸ್ವಿಯಾಗಿದ್ದು, ಚಾರಿತ್ರಿಕ ಘಟನೆಯಾಗಿದೆ. ಮಹಿಳೆಯರ ಮುಂದಿನ ಹೋರಾಟಗಳಿಗೆ ನಾಂದಿಯಾಗಿದೆ.

ಚಂದಾ ವಿವರ

	ರೂ. ಪೈಸೆ
ವರ್ಷಕ್ಕೆ	20—00
ಅರ್ಧ ವರ್ಷಕ್ಕೆ	10—00
ಬಿಡಿ ಪ್ರತಿ	0—40

ಓದುಗರಲ್ಲಿ ವಿನಂತಿ

ಪತ್ರಿಕೆಯನ್ನು ಬೆಂಗಳೂರಿನಿಂದ ಹೊರಡಿಸುವಾಗ ಪ್ರಾರಂಭದ ಕೆಲವೊಂದು ಅನಾನುಕೂಲತೆಗಳಿಂದಲಾಗಿ ಹೊರತರುವುದು ಸ್ವಲ್ಪ ವಿಳಂಬ ಮುಂದಿನ ಕೆಲವೊಂದು ಸಂಚಿಕೆ ಸರಿಯಾಗಿ ಹೊರಡಿಸಲಾಗುವುದು. ಓದುಗರು ಸಹಕರಿಸಬೇಕಾಗಿ ವಿನಂತಿ.

—ಸಂಪಾದಕ

ತಾತಗುಣಿ ಎಸ್ಟೇಟ್‌ನ ಮತ್ತು ಸುತ್ತಮುತ್ತಲ ಕಾರ್ಮಿಕರಿಗೆ ಕಾಂ॥ ಗೋದಾವರಿ ಪರುಳೇಕರ್ ಕರೆ

ಬೆಂಗಳೂರು ಜಿಲ್ಲಾ ರೈತಸಂಘವು ಮಾರ್ಚ್ 10ರ ಶನಿವಾರ ಸಂಜೆ 6.30ಕ್ಕೆ ಏರ್ಪಡಿಸಿದ್ದ ಒಂದು ಬಹಿರಂಗ ಸಭೆಯನ್ನು ಉದ್ದೇಶಿಸಿ ಅಖಿಲ ಭಾರತ ರೈತಸಂಘದ ಉಪಾಧ್ಯಕ್ಷೆಯಾದ ಕಾಂ. ಗೋದಾವರಿ ಪರುಳೇಕರ್ ಅವರು ಮಾತನಾಡಿದರು. ಕಾಂ. ಎನ್. ಎಲ್. ಉಪಾಧ್ಯಾಯ ಅವರು ಅಧ್ಯಕ್ಷತೆ ವಹಿಸಿದ್ದರು.

ಮಹಾರಾಷ್ಟ್ರದಲ್ಲಿ ರೈತರು ಕೆಂಪು ಬಾವುಟದಡಿಯಲ್ಲಿ ಹೋರಾಟ ನಡೆಸಿ ಅನೇಕ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಅದೇ ರೀತಿ ಇಲ್ಲಿನ ಸಹಸ್ರಾರು ರೈತರು ಒಗ್ಗಟ್ಟಾಗಿ ಸೇರಿ ಹೋರಾಟ ಮಾಡಬೇಕಾಗಿದೆ. ಇಲ್ಲಿ ಸಾವಿರಾರು ಎಕರೆ ಬಂಜರು ಭೂಮಿ ಇದೆ. ಅದನ್ನು ರೈತರಾದ ನೀವು ಪಡೆಯಬೇಕು. ಇದಕ್ಕಾಗಿ ಹೋರಾಟ ನಡೆಸಿ, ರೈತಕಾರ್ಮಿಕರು ತಮ್ಮ ಕನಿಷ್ಠ ಸವಲತ್ತನ್ನು ಪಡೆಯಬೇಕಾದರೂ ಕೂಡ ಐಕ್ಯಹೋರಾಟ ಒಂದೇ ದಾರಿ ಎಂದು ಹೇಳಿದರು.

ಜಮೀನ್ದಾರರು ಬಡ ಗೇಣಿದಾರರ ಮೇಲೆ ದೌರ್ಜನ್ಯ ನಡೆಸಿದರೆ ಒಗ್ಗಟ್ಟಾಗಿ ರೈತರು ಹೋರಾಡಬೇಕು. ಸರ್ಕಾರ, ಪೋಲೀಸು, ಕಾನೂನು ಎಲ್ಲದರಲ್ಲೂ ನಿಮಗೆ ರಕ್ಷಣೆ ಸಿಗುವಂತೆ ಹೋರಾಡಿ. ಅದು ನಿಮ್ಮ ಹಕ್ಕು ಎಂದು ಕಾಂ. ಗೋದಾವರಿ ಪರುಳೇಕರ್ ಕರೆಯಿತ್ತರು. ಚೀನಾ ದೇಶಕ್ಕೆ ತಾವು ಇತ್ತ ಭೇಟಿಯ ಅನುಭವಗಳನ್ನು ವಿವರಿಸುತ್ತಾ, ಅಲ್ಲಿನ ಹಾಗೆ ಭಾರತದ ರೈತರೂ ವೈಜ್ಞಾನಿಕ ಸಮಾಜವಾದದ ನಿರ್ಮಾಣಕ್ಕೆ ದುಡಿಯಬೇಕು ಎಂದರು. ಮಹಾರಾಷ್ಟ್ರದಲ್ಲಿ ಇನ್ನು ಕೆಲವು ದಿನಗಳಲ್ಲಿ ನಡೆಯಲಿರುವ ರೈತರ ಸಮ್ಮೇಳನಕ್ಕೆ ಇಲ್ಲಿಂದ ಕೆಲವು ಪ್ರತಿನಿಧಿಗಳು ಬಂದು ಭಾಗವಹಿಸಬೇಕೆಂದು ಕಾಂ. ಗೋದಾವರಿ ಪರುಳೇಕರ್ ಕರೆ ಕೊಟ್ಟರು. □

ಮೈಕೋ ಕಾರ್ಮಿಕ ಸಂಘಕ್ಕೆ ಕಾಂ॥ ಸೂರ್ಯನಾರಾಯಣರಾಯರ ಆಯ್ಕೆ

ಬೆಂಗಳೂರು ನಗರದಲ್ಲಿ ಪ. ಜರ್ಮನಿಯ ಬಂಡವಾಳ ಹೂಡಿಕೆಯುಳ್ಳ ಮೈಕೋ ಕಾರ್ಖಾನೆಯಿದೆ. ಇದರಲ್ಲಿ ಸುಮಾರು ಏಳು ಸಹಸ್ರ ಜನ ಕಾರ್ಮಿಕರಿದ್ದಾರೆ. ಇದರ ಶಾಖೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಸಹ ಇದೆ. ಅಲ್ಲಿ ಸುಮಾರು ಮೂರು ಸಹಸ್ರ ಕಾರ್ಮಿಕರಿದ್ದಾರೆ. ಈ ಕಾರ್ಖಾನೆಯ ವರ್ಷದ ವ್ಯವಹಾರ ಸುಮಾರು 95 ಕೋಟಿ ರೂ.ಗಳಿಗೂ ಹೆಚ್ಚಿದೆ.

ಬೆಂಗಳೂರಿನ ಈ ಕಾರ್ಖಾನೆಯ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಕಳೆದ ಹತ್ತು ವರ್ಷಗಳಿಂದಲೂ ಐ.ಎನ್.ಟಿ.ಯು.ಸಿ.ನ ಮುಖಂಡರಾದ ಶ್ರೀ ಎಂ.ಎಸ್. ಕೃಷ್ಣನ್ ಅವರು ಕಾರ್ಯ ನಿರ್ವಹಿಸುತ್ತಿದ್ದರು. ತಾ॥ 18-2-79 ರಂದು ಸರ್ವಸದಸ್ಯರ ಸಭೆಯು ಸೇರಿ, ಕಾಂ॥ ಎಸ್. ಸೂರ್ಯನಾರಾಯಣ ರಾವ್ ಅವರನ್ನು ಸರ್ವಾನುಮತದಿಂದ ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

**

ಎಸ್. ಎಫ್. ಐ. ಹೋರಾಟಕ್ಕೆ ಜಯ

ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕು ಕಡಬದಲ್ಲಿ, ಸರಕಾರಿ ಹೈಸ್ಕೂಲಿನ ಆಡಳಿತವರ್ಗ ಹೈಸ್ಕೂಲಿನ ವಿದ್ಯಾರ್ಥಿ ನಾಯಕನನ್ನು ಮತ್ತು ಅವರ ನ್ಯಾಯವಾದ ಹೋರಾಟಕ್ಕೆ ಬೆಂಬಲವಿತ್ತ ಇತರ ಕೆಲವರನ್ನು ಅಮಾನತುಗೊಳಿಸಿತು. ಇದಕ್ಕೆಲ್ಲಾ ಕೋಮುವಾದಿ ಶಕ್ತಿಗಳ ಪ್ರಚೋದನೆಯೆಂದು ಹೇಳಲಾಗುತ್ತಿದೆ. ಎಸ್. ಎಫ್. ಐ. ನ ಜಿಲ್ಲಾ ಮುಖಂಡರುಗಳ, ಹಾಗೆಯೇ ರೈತಕಾರ್ಮಿಕ ಮುಖಂಡರುಗಳ ಸಹಕಾರದಿಂದ ಕಡಬ ವಿದ್ಯಾರ್ಥಿಗಳು ಚಳುವಳಿ ನಡೆಸಿ ಕೊನೆಗೆ ಶಾಲೆಗೆ ಪ್ರವೇಶ ದೊರಕಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. ಈ ಯಶಸ್ವಿ ಹೋರಾಟಕ್ಕೆ ಜಿಲ್ಲಾ ಸಮಿತಿ ಕಾರ್ಯದರ್ಶಿ ರಾಘವನ್, ರಾಜ್ಯಸಮಿತಿ ಸದಸ್ಯರಾದ ಶ್ರೀನಿವಾಸ್, ರಾಜ್ಯ ಸಮಿತಿ ಆಮಂತ್ರಿತೆ ಸುಳ್ಯದ ಸರಸ್ವತಿ, ಜಿಲ್ಲಾ ಎಸ್. ಎಫ್. ಐ. ಯ ಉಮೇಶ, ಮೋಹನಚಂದ್ರ, ಚಂದ್ರಕಾಂತ, ರಮೇಶ್, ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಬಿ. ವಿಷ್ಣುಮೂರ್ತಿ ಮೊದಲಾದವರು ಮಾರ್ಗದರ್ಶನ, ಸಹಾಯ ನೀಡಿದರು. ಚಂದ್ರಕಾಂತನವರ ಮೇಲೆ ಧಾಳಿಯೂ ನಡೆದಿತ್ತು. ಊರಿನ ರೈತಕಾರ್ಮಿಕರೂ ಬೆಂಬಲ ವಿತ್ತರು.

ಶ್ರೀ

ಪಾಟ್ನಾ ರಾಜ್ಯ ... ಯೂನಿಯನ್ ... ಯಕರೂ ಸೇರಿದಂತೆ ಕೊನೆಯ ಪಕ್ಷ 500 ಜನರು ಕಳೆದ 10 ತಿಂಗಳಲ್ಲಿ ಸತ್ತಿದ್ದಾರೆ ಅಥವಾ ಕೊಲ್ಲಲ್ಪಟ್ಟಿದ್ದಾರೆ ... ಮೂಲಗಳು ...ಸುವ. ಹೀಗೆ ಸತ್ತವರ ಮತ್ತು ಕೊಲ್ಲಲ್ಪಟ್ಟವರ ಸಂಖ್ಯೆ ಸುಮಾರು 2000 ದಷ್ಟು ಎಂದು ಅನಧಿಕೃತ ಮೂಲಗಳು ತಿಳಿಸಿವೆ.

—ದಿ ಸ್ಟೇಟ್ಸ್‌ಮನ್

ಹಟ್ಟಿ ಚಿನ್ನದ ಗಣಿಯಲ್ಲಿ ಎಸ್.ಎಫ್.ಐ. ಶಾಖೆಯ ಆರಂಭ

ಕಾಂ. ಮುನೀರ್‌ಪಾಶ ಅವರು ದಿನಾಂಕ 5-3-79 ರಂದು ಸರಕಾರಿ ಹೈಸ್ಕೂಲಿನ ಹತ್ತಿರ ವಿದ್ಯಾರ್ಥಿಗಳನ್ನು ಸಭೆ ಸೇರಿಸಿದ್ದರು.

ಎಸ್. ಎಫ್. ಐ. ನ ಸಲುವಾಗಿ ದುಡಿದು ಹುತಾತ್ಮರಾದ ಎಲ್ಲ ನಾಯಕರಿಗೆ ಮೊದಲು ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾಂ. ನರಸಿಂಗಭಾನ ಠಾಕುರ ಅವರು ಕೇರಳದ ಪಿ. ರಾಜನ್ ಅವರ ಬಗ್ಗೆ ಪ್ರಸ್ತಾಪಿಸಿ, ಸರ್ಕಾರ, ಪೋಲೀಸರು ಇವರು ನಡೆಸುವ ದಬ್ಬಾಳಿಕೆಯನ್ನು ಕುರಿತು ಮಾತನಾಡಿದರು. ತೀರ್ಥಹಳ್ಳಿಯಲ್ಲಿ ನಡೆದ ಎಸ್. ಎಫ್. ಐ. ರಾಜ್ಯಸಮ್ಮೇಳನದ ಬಗ್ಗೆ ವಿವರಿಸಿ ಹೇಳಿದರು. ಕಾಂ. ಚೌಲಾ, ಕಾಂ. ಹಸನ್, ಕಾಂ. ಯಾಕುಬ ಅವರು ಸಂಘಟನೆಯ ಬಗ್ಗೆ ಮಾತನಾಡಿದರು.

ನಂತರ ಹಟ್ಟಿ ಚಿನ್ನದ ಗಣಿಯ ಶಿಕ್ಷಣರಂಗದ ಸಮಸ್ಯೆಗಳ ಬಗ್ಗೆ ಕೆಲವು ಠರಾವುಗಳನ್ನು ಮಂಡಿಸಲಾಯಿತು. ನಂತರ ಒಂದು ಅಡ್‌ಹಾಕ್ ಸಮಿತಿಯನ್ನು ರಚಿಸಲಾಯಿತು.

(·)

ಚಿಕ್ಕಬಳ್ಳಾಪುರದ ಧರಣಿ ಸತ್ಯಾಗ್ರಹದಲ್ಲಿ ಮುಸ್ಲಿಂ ಮಹಿಳೆಯರ ಪಾತ್ರ

ಹರಿಜನರು ಮತ್ತು ದುರ್ಬಲ ವರ್ಗದವರಿಗೆ ಉಚಿತ ನಿವೇಶನಗಳನ್ನು ಹಂಚಬೇಕೆಂದು ಒತ್ತಾಯಿಸಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಿ ಪುರಭವನದ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ಎಸ್. ಲಕ್ಷ್ಮಯ್ಯ, ಮುದ್ದಪ್ಪ, ರಾಮಯ್ಯ, ಕಾಂತರಾಜು, ನಂಜಮ್ಮ, ಚಿನ್ನಮ್ಮ, ಪಾಪಮ್ಮ, ಅಶ್ವತ್ಥ, ಜಯನಬ್ಬಿ, ಮಹಬೂಬ್ಬಿ ಮುಂತಾದವರು ಇದರಲ್ಲಿ ಭಾಗವಹಿಸಿದರು. ಸತ್ಯಾಗ್ರಹದಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ನೂರು ಮಂದಿಗೂ ಮೇಲ್ಪಟ್ಟು ಮುಸ್ಲಿಂ ಮಹಿಳೆಯರು ಪಾಲ್ಗೊಂಡಿದ್ದರು.

ಪುರಸಭೆಯವರು ಬಡವರಿಗೆ ಮತ್ತು ಹರಿಜನರಿಗೆ ಖಾಲಿ ನಿವೇಶನಗಳನ್ನು ಹಂಚಲು ವಿಳಂಬ ಮಾಡುತ್ತಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರೂ, ಪುರಸಭಾ ಸದಸ್ಯರೂ ಆದ ಕಾಂ. ಎಸ್. ಲಕ್ಷ್ಮಯ್ಯನವರು ಖಂಡಿಸಿ, ಜಾಗ್ರತೆ ನಿವೇಶನಗಳನ್ನು ಹಂಚಿ, ನೀರಿನ ಸೌಕರ್ಯವನ್ನು ಕೂಡಲೇ ಉತ್ತಮಪಡಿಸಬೇಕೆಂದು ಪುರಸಭೆಯ ಆಡಳಿತವರ್ಗವನ್ನು ಒತ್ತಾಯಿಸಿದರು.

(·)

Statement about ownership and other particulars about newspaper "AIKYARANGA" to be published in the first issue every year after the last day of February.

FORM IV

(See Rule 8)

1.	Place of Publication	: Bangalore
2.	Periodicity of its Publication	: Weekly
3.	Printer's Name	: P. Ramachandra Rao
	(Whether citizen of India?)	: Yes
	Address	: L-56, K. V. Temple Street, Sultanpet, BANGALORE-560 053
4.	Publisher's Name	: P. Ramachandra Rao
	(Whether citizen of India?)	: Yes
	Address	: L-56, K. V. Temple Street, Sultanpet, BANGALORE-560 053
5.	Editor's Name	: M. K. Bhat
	(Whether citizen of India)	: Yes
	Address	: L-56, K. V. Temple Street, Sultanpet, BANGALORE-560 053
6.	Names and Addresses of individuals who own the Newspaper and Partners or shareholders holding more than one percent of the total capital.	: Karnataka State Committee, Communist Party of India (Marxist) L-56, K. V. Temple Street, Sultanpet, BANGALORE-560 053

I, P. Ramachandra Rao hereby declare that the particulars given above are true to the best of my knowledge and belief.

Date : 18-3-1979

P. Ramachandra Rao
Signature of Publisher

ಪರಿಸರ

ತುರ್ತು ಪರಿಸ್ಥಿತಿಯ ಸಮಯದಲ್ಲಿ ಎಲ್ಲ ಜನತೆಯ ಬಾಯಿ ಮುಚ್ಚಿಸಿದ್ದ ಇಂದಿರಾ ಸರ್ಕಾರದ ಕ್ರಮವನ್ನು ಹಾಡಿ, ಹೊಗಳಿ, ಸಮರ್ಥಿಸಿದ್ದ (ಈಗಲೂ ಅದನ್ನೇ ಮುಂದುವರಿಸುತ್ತಿರುವ) ದೇವರಾಜ ಅರಸು ಅವರು, ಅಭಿವ್ಯಕ್ತಿ ಸ್ವಾತಂತ್ರ್ಯದ ಮಾತನಾಡುತ್ತಿರುವುದನ್ನು ನೋಡಿದರೆ ಇವರೆಂತಹ ಚಾಣಾಕ್ಷರು ಎನಿಸುತ್ತದೆ.

—ಗೋದಾವರಿ ಪರುಳೇಕರ್
(ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕಿ)

—

ಕ್ರಾಂತಿಕಾರಿ ಸಾಹಿತ್ಯ ಜನಪದೀಕರಣವಾಗಬೇಕು.

—ಸಿದ್ದಲಿಂಗಯ್ಯ
(ದಲಿತ ಕವಿ)

—

ನಮ್ಮ ದೇಶದ ಹಳ್ಳಿಗಳಲ್ಲಿ ಹುಟ್ಟುತ್ತಿರುವ ಪ್ರತಿ ಸಾವಿರ ಮಕ್ಕಳಲ್ಲಿ 150 ಮಕ್ಕಳು ಪೌಷ್ಟಿಕ ಆಹಾರದ ಕೊರತೆ... ಸಾಯುತ್ತಾರೆ.

—ಡಾ॥ ಬಿಸಗರಹಳ್ಳಿ ರಾಮಣ್ಣ
(ಕನ್ನಡದ ಖ್ಯಾತ ಬರಹಗಾರರು)

—

ಯಾವಾಗಲಾದರೊಮ್ಮೆ ಪ್ರತಿಭಟಿಸುವ ಬಂಡಾಯಗಾರ ನಾನು.

—ಸಿ. ಜಿ. ಕೆ. ರೆಡ್ಡಿ
(ಖ್ಯಾತ ಪತ್ರಕರ್ತ)

ಬೊಂಬಾಯಿ, ದಿಲ್ಲಿಯಂತಹ ಮಹಾನಗರಗಳಲ್ಲಿ ಶ್ರೀಮಂತರು ವಾಸಿಸುವ ಪ್ರದೇಶಗಳಲ್ಲಿನ ನಿವೇಶನಗಳ ಬೆಲೆ ಚದುರಡಿ ಒಂದಕ್ಕೆ ಒಂದುವರೆ ಸಾವಿರದಿಂದ ಎರಡು ಸಾವಿರ ರೂಪಾಯಿಗಳಾದರೂ ಕೊಳ್ಳಲು ನಾಮುಂದು ತಾಮುಂದು ಎಂಬ ಸ್ಪರ್ಧೆ ಇದೆ. ಆ ಶ್ರೀಮಂತರ ಹಣವೆಲ್ಲ ಕಪ್ಪುಹಣವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

—ದಿ ಟೈಮ್ಸ್ ಆಫ್ ಇಂಡಿಯ

—

ಜನತಾ ಪಕ್ಷ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಕೇವಲ 137 ಹರಿಜನ ಮತ್ತು ಆದಿವಾಸಿ ತರುಣಿಯರ ಅತ್ಯಾಚಾರ ಮತ್ತು ಕೊಲೆಗಳಾಗಿವೆ.

—ಮಧ್ಯ ಪ್ರದೇಶ ಅಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ಆ ರಾಜ್ಯದ ಗೃಹ ಸಚಿವರ ಉತ್ತರ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053.